ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 25

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795

ಬುಧವಾರ: 31-12-2025

# 79,000 ಕೋಟಿ ಶಸ್ತ್ರಾಸ್ತ್ರ ಒಪ್ಪಂದಕ್ಕೆ ಅನುಮೋದನೆ

**ನವದೆಹಲಿ,ಡಿ.30-**ಭಾರತೀಯ ಸಶಸ್ತ್ರ ಪಡೆಗಳ ಮೂರು ವಿಭಾಗಗಳಾದ ಭೂಸೇನೆ, ವಾಯುಪಡೆ ಮತ್ತು ನೌಕಾಪಡೆಗೆ 79,000 ಕೋಟಿ ರೂ. ಮೌಲ್ಯದ ಕ್ಷಿಪಣಿಗಳು, ರಾಕೆಟ್‌ಗಳು, ಡ್ರೋನ್‌ಗಳು ಮತ್ತು ಇತರ ಆಧುನಿಕ ಶಸ್ತ್ರಾಸ್ತ್ರಗಳ ಖರೀದಿಗೆ ರಕ್ಷಣಾ ಸಚಿವಾಲಯ ಅನುಮೋದನೆ ನೀಡಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ರಕ್ಷಣಾ ಸ್ವಾಧೀನ ಮಂಡಳಿಯ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸಿಡಿಎಸ್ ಜನರಲ್ ಅನಿಲ್ ಚೌಹಾಣ್, ಸೇನಾ ಮುಖ್ಯಸ್ಥರು ಮತ್ತು ರಕ್ಷಣಾ ಕಾರ್ಯದರ್ಶಿ ಕೂಡ ಸಭೆಯಲ್ಲಿ ಉಪಸ್ಥಿತರಿದ್ದರು. ಪಿನಾಕಾ ಮಲ್ಟಿ-ರಾಕೆಟ್ ಲಾಂಚರ್‌ಗಾಗಿ ಅಲೆದಾಡುವ ಯುದ್ಧಸಾಮಗ್ರಿಗಳು ಮತ್ತು ದೀರ್ಘ-ಶ್ರೇಣಿಯ ಮಾರ್ಗದರ್ಶಿ ರಾಕೆಟ್‌ಗಳನ್ನು ಸೇನೆಗೆ ಅನುಮೋದಿಸಲಾಗಿದೆ. ಶತ್ರು ಸಣ್ಣ ಡ್ರೋನ್‌ಗಳನ್ನು ಪತ್ತೆಹಚ್ಚಲು ಮತ್ತು ಪ್ರತಿಬಂಧಿಸಲು ಸ್ಥಳೀಯ ಇಂಟಿಗ್ರೇಟೆಡ್ ಡ್ರೋನ್ ಡಿಟೆಕ್ಷನ್ ಮತ್ತು ಇಂಟರ್ಡಿಕ್ಷನ್ ಸಿಸ್ಟಮ್ ಖರೀದಿಯೂ ಇದರಲ್ಲಿ ಸೇರಿದೆ. ಈ ವ್ಯವಸ್ಥೆಯು ಯುದ್ಧತಂತ್ರದ ಯುದ್ಧಭೂಮಿ ಮತ್ತು



ಒಳನಾಡಿನಲ್ಲಿ ಡ್ರೋನ್ ಬೆದರಿಕೆಗಳನ್ನು ಪರಿಹರಿಸುತ್ತದೆ. ವಾಯುಪಡೆಗಾಗಿ ಅಸ್ತ್ರಾ ಮಾರ್ಕ್-2 ಕ್ಷಿಪಣಿಗಳು ಮತ್ತು ಸ್ಪೈಸ್-1000 ದೀರ್ಘ-ಶ್ರೇಣಿಯ ಬಾಂಬ್‌ಗಳ ಖರೀದಿಗೆ ಅನುಮೋದನೆ ನೀಡಲಾಗಿದೆ. ಸುಖೋಯ್ ಮತ್ತು ಎಲ್‌ಸಿಎ ತೇಜಸ್ ವಿಮಾನಗಳು ಈಗ ಅಸ್ತ್ರಾ ಕ್ಷಿಪಣಿಯನ್ನು ಹೊಂದಿದ್ದು, ಮಿರಾಜ್ ಫೈಟರ್ ಜೆಟ್‌ಗಳಿಗಾಗಿ ಸ್ಪೈಸ್-1000 ಬಾಂಬ್ ಸೇರಿಸಲಾಗಿದೆ.

ಹೆಚ್ಚುವರಿಯಾಗಿ, ಎಲ್‌ಸಿಎ ತೇಜಸ್ ಪೈಲಟ್‌ಗಳಿಗೆ ತರಬೇತಿ ನೀಡಲು ಪೂರ್ಣ ಮಿಷನ್ ಸಿಮ್ಯುಲೇಟರ್ ಮತ್ತು ಸ್ವಯಂಚಾಲಿತ ಟೇಕ್-ಆಫ್ ಮತ್ತು ಲ್ಯಾಂಡಿಂಗ್ ರೆಕಾರ್ಡಿಂಗ್ ವ್ಯವಸ್ಥೆಯನ್ನು ಖರೀದಿಸಲು ಅನುಮೋದನೆ ನೀಡಲಾಗಿದೆ.

ನೌಕಾಪಡೆಗೆ ಹೈ ಆಲ್ಟಿಟ್ಯೂಡ್ ಲಾಂಗ್ ರೇಂಜ್ ರಿಮೋಟ್ಲಿ ಪೈಲಟೆಡ್ ಏರ್‌ಕ್ರಾಫ್ಟ್ ಸಿಸ್ಟಮ್ಸ್ ಗುತ್ತಿಗೆಗೆ ಅನುಮತಿ ನೀಡಲಾಗಿದೆ. ಈ ಡ್ರೋನ್‌ಗಳನ್ನು ಹಿಂದೂ ಮಹಾಸಾಗರದಲ್ಲಿ ಗುಪ್ತಚರ, ಕಣ್ಗಾವಲು ಮತ್ತು ವಿಚಕ್ಷಣ ಕಾರ್ಯಾಚರಣೆಗಳಿಗೆ ಬಳಸಲಾಗುತ್ತದೆ.
ಬೊಲ್ಲಾರ್ಡ್-ಪುಲ್ ಟಗ್ ಬೋಟ್‌ಗಳು ಮತ್ತು ಹೈ-ಫ್ರೀಕ್ವೆನ್ಸಿ ರೇಡಿಯೋ ಮ್ಯಾನ್‌ಪ್ಯಾಕ್‌ಗಳನ್ನು ಸಹ ನೌಕಾಪಡೆಗೆ ಅನುಮೋದಿಸಲಾಗಿದೆ. ಈ ನಿರ್ಧಾರವು ಭಾರತೀಯ ಸೇನೆಯ ಸನ್ನದ್ಧತೆ ಮತ್ತು ಆಧುನಿಕ ಯುದ್ಧ ಸಾಮರ್ಥ್ಯಗಳನ್ನು ಗಮನಾರ್ಹವಾಗಿ ಹೆಚ್ಚಿಸುತ್ತದೆ. ತಜ್ಞರ ಪ್ರಕಾರ, ಈ ಕ್ರಮವು ರಕ್ಷಣಾ ಬಲವನ್ನು ಹೆಚ್ಚಿಸುವುದಲ್ಲದೆ, ಪ್ರಾದೇಶಿಕ ಸಮತೋಲನ ಮತ್ತು ಕಡಲ ಭದ್ರತೆಗೆ ಸಹ ಮುಖ್ಯವಾಗಿದೆ.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

6360866626

## ಬಾಂಗ್ಲಾದೇಶ ಮಾಜಿ ಪ್ರಧಾನಿ ಖಲೀದಾ ಜಿಯಾ ನಿಧನ



**ಢಾಕಾ, ಡಿ.30-** ಬಾಂಗ್ಲಾದೇಶ ರಾಷ್ಟ್ರಿಯತಾವಾದಿ ಪಕ್ಷದ (ಬಿಎನ್‌ಪಿ) ದೀರ್ಘಕಾಲದ ಮುಖ್ಯಸ್ಥೆ,ದೇಶದ ಮೊದಲ ಮಹಿಳಾ ಪ್ರಧಾನಿ ಎಂಬ ಗೌರವಹೊಂದಿದ್ದ ಖಲೀದಾ ಜಿಯಾ(80) ನಿಧನರಾಗಿದ್ದಾರೆ.ತಮ ಬದ್ಧ ವೈರಿ ಶೇಖ್ ಹಸೀನಾ ಜೊತೆಗೆ ದಶಕಗಳ ಕಾಲ ದೇಶದ ರಾಜಕೀಯದಲ್ಲಿ ಪ್ರಾಬಲ್ಯ ಸಾಧಿಸಿದ್ದ ಜಿಯಾ ಮೂರು ಬಾರಿ ಪ್ರಧಾನಿಯಾಗಿದ್ದರು.

ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಮುಂಜಾನೆ ಢಾಕಾದಲ್ಲಿ ನಿಧನರಾಗಿದ್ದಾರೆ. 1975 ರಲ್ಲಿ ಅರೆ-ಮಿಲಿಟರಿ ಆಡಳಿತದ ನಂತರ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಪುನಃಸ್ಥಾಪಿಸುವಲ್ಲಿ ಅವರ ಪಾತ್ರಕ್ಕಾಗಿ ಅವರ ಬೆಂಬಲಿಗರು ಅವರನ್ನು ಮೆಚ್ಚುತ್ತಾರೆ. 1990 ರ ದಶಕದಲ್ಲಿ ಮತ್ತು 2000 ರ ದಶಕದ ಆರಂಭದಲ್ಲಿ ಜಿಯಾ ಬಾಂಗ್ಲಾದೇಶದ ರಾಜಕೀಯದಲ್ಲಿ ಹೆಚ್ಚಾಗಿ ಪ್ರಾಬಲ್ಯ ಸಾಧಿಸಿದರು.

ನಾಲ್ಕು ದಶಕಗಳ ಕಾಲ ನಡೆದ ಅವರ ರಾಜಕೀಯ ಪ್ರಯಾಣವು ಅಗಾಧವಾದ ಏರಿಳಿತಗಳಿಂದ ಕೂಡಿತ್ತು ಪ್ರಮುಖ ಪಕ್ಷವನ್ನು ಮುನ್ನಡೆಸುವುದು ಮತ್ತು ದೇಶವನ್ನು ಆಳುವುದರಿಂದ ಹಿಡಿದು ಭ್ರಷ್ಟಾಚಾರ ಆರೋಪಗಳ ಮೇಲೆ ಶಿಕ್ಷೆಗೊಳಗಾದ ಮತ್ತು ನಂತರ ಅಧ್ಯಕ್ಷರ ಕ್ಷಮೆಯನ್ನು ಪಡೆಯುವವರೆಗೆ ಅವರು ಅವರ ರಾಜಕೀಯ ಜೀವನ ಆಕಸಿಕ ಕುತೂಹಲಕಾರಿ ಸಂದರ್ಭಗಳಿದೆ.

ತಮ 35 ನೇ ವಯಸ್ಸಿನಲ್ಲಿ ಪತಿ ಕಳೆದುಕೊಂಡು ವಿಧವೆಯಾದ ಅವರು ಆಕಸಿಕ ವಾಗಿ ರಾಜಕೀಯ ಪ್ರವೇಶಿಸಿ ಪ್ರಧಾನ ಮಂತ್ರಿ ಸ್ಥಾನವನ್ನು ವಹಿಸಿಕೊಂಡರು, ಆದರೆ ರಾಜಕೀಯ ಅವರು ಇಷ್ಟಪಡುತ್ತಿರಲ್ಲಿಲ್ಲ ಮತ್ತು ಮುಂದು ಪ್ರಧಾನಿ ಹುದ್ದೆಯನ್ನು ಯೋಜಿಸಿರಲಿಲ್ಲ. 2ನೇಪುಟಕ್ಕೆ►

# ಅಬಕಾರಿ ಇಲಾಖೆಯಿಂದ ಸಿಹೆಚ್ ಪೌಡರ್, ಕಲಬೆರೆಕೆ ಸೇಂದಿ ದುಷ್ಪರಿಣಾಮದ ಅರಿವು ಕಾರ್ಯಕ್ರಮ

ಧೈರ್ಯದ ದಾರಿ

**ರಾಯಚೂರು ಡಿ,30-** ಜಿಲ್ಲಾಡಳಿತ, ಅಬಕಾರಿ ಇಲಾಖೆ, ಪೋಲಿಸ್ ಇಲಾಖೆ ಮತ್ತು ಜಿಲ್ಲಾ ಆರೋಗ್ಯ ಇಲಾಖೆಯಿಂದ ನಗರದ ಯಕ್ಲಸ್‌ಪೂರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಡಿಸೆಂಬರ್ 29ರಂದು ಸಿಹೆಚ್ ಪೌಡರ್, ಕಲಬೆರೆಕೆ ಸೇಂದಿ ಸೇವನೆಯಿಂದಾಗುವ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ನಡೆಯಿತು.

ಈ ವೇಳೆ ಮನೋರೋಗ ತಜ್ಞರಾದ ಡಾ.ಮನೋಹರ್ ಪತ್ತಾರ ಅವರು ಮಾತನಾಡಿ, ಸೇಂದಿ ಹಾಗೂ ಮಾದಕ ವಸ್ತುಗಳ ಸೇವನೆಯಿಂದ ಮನುಷ್ಯನ ದೇಹದ ಮೇಲೆ ದುಷ್ಪರಿಣಾಮ ಗಳಾಗಲಿವೆ. ತಲೆನೋವು, ನಿದ್ರಾಹೀನತೆ, ವಾಕರಿಕೆ, ನರದೌರ್ಬಲ್ಯ, ಅಸಹಜ ಹೃದಯ ಲಯಗಳ ಮತ್ತು ಆಂತರಿಕ ರಕ್ತಸ್ರಾವ ಹಾಗೂ ಕ್ಯಾನ್ಸರ್ ಮುಂತಾದ ಆರೋಗ್ಯ ಸಮಸ್ಯೆಗಳು ಹಾಗೂ ಚಿತ್ತಚೆಂಚಲತೆ, ಜ್ಞಾಪಕ ಶಕ್ತಿ ಕ್ಷಿಣಿಸುವುದು, ಖಿನ್ನತೆ ಹಾಗೂ ಅತ್ಮಹತ್ಯೆಯು ಆಲೋಚನೆಗಳು ಮುಂತಾದ ಮಾನಸಿಕ ಕಾಯಿಲೆಗಳು ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುತ್ತವೆ ಎಂದರು.



ಮಾದಕ ವಸ್ತುಗಳ ಸೇವನೆಯಿಂದ ಯುವಜನತೆಗೆ ದೂರ ಇರುವಂತೆಯು ಹಾಗೂ ಚಟಗಳಿಗೆ ಬಲಿಯಾದ ವ್ಯಕ್ತಿಗಳಿಗೆ ಸೂಕ್ತ ಚಿಕಿತ್ಸೆ ನೀಡಿ ಗುಣ ಪಡಿಸುವ ಅವಕಾಶಗಳಿದ್ದು, ಡಿ-ಆಡಿಕ್ಷನ್ ಸೆಂಟ ರ್‌ಗಳಲ್ಲಿ ಮಾದಕ ವಸ್ತು ವ್ಯಸನಿಗಳಿಗೆ ಚಿಕಿತ್ಸೆ ನೀಡಲಾಗುವುದು ಎಂದರು.

ಈ ವೇಳೆ ರಿಮ್ಸ್ ಆಸ್ಪತ್ರೆಯ ಮಾನಸಿಕ ಆರೋಗ್ಯ ತಜ್ಞರಾದ ಡಾ.ರಮೇಶ ಬಾಬು ಅವರು ಮಾತನಾಡಿ, ಸೇಂದಿಯ ಬಗ್ಗೆ ಇರುವ ಮೌಢ್ಯತೆಯಿಂದ ನಾವು ಹೊರ ಬರಬೇಕು ಎಂದರು.

ಈ ವೇಳೆ ಗ್ರಾಮೀಣ ಠಾಣೆಯ ಆರಕ್ಷಕರಾದ ಸಾಬಯ್ಯ ಅವರು ಮಾತನಾಡಿ, ಸೇಂದಿ ಸೇವ ನೆಯಿಂದ ಸಮಾಜದಲ್ಲಿ ಅಶಾಂತಿ ಮೂಡುತ್ತಿದೆ. ದೈಹಿಕ ಮತ್ತು ಮಾನಸಿಕ ಸ್ವಾಸ್ತ್ಯ ಹಾಳು ಮಾಡುತ್ತಿರುವ ಸೇಂದಿ ಮತ್ತು 2ನೇಪುಟಕ್ಕೆ►

## ಉಮ್ರಾ ಯಾತ್ರಾರ್ಥಿಗಳಿಗೆ ಸೋಮವಾರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುಗೌಡ ಬಾದರ್ಲಿ ಸನ್ಮಾನಿಸಿ ಬೀಳ್ಕೊಟ್ಟರು





ಧೈರ್ಯದ ದಾರಿ

**ಸಿಂಧನೂರು,ಡಿ.30:** ಉಮ್ರಾ ಯಾತ್ರೆ ಕೈಗೊಂಡ ತಾಲ್ಲೂಕಿನ 70 ಯಾತ್ರಾರ್ಥಿಗಳಿಗೆ ಸೋಮವಾರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುಗೌಡ ಬಾದರ್ಲಿ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಸನ್ಮಾನಿಸಿ ಬೀಳ್ಕೊಟ್ಟರು.

ನಂತರ ಬಾಬುಗೌಡ ಬಾದರ್ಲಿ ಮಾತನಾಡಿ, ಧಾರ್ಮಿಕ ಪುಣ್ಯಕ್ಷೇತ್ರಗಳ ದರ್ಶನದಿಂದ ಮಾನಸಿಕ ನೆಮ್ಮದಿ ದೊರೆಯುವುದರ ಜೊತೆಗೆ ಶಾಂತಿ, ಸಾಮರಸ್ಯದ ಭಾವನೆ ಮೂಡುತ್ತದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಕೆಡಿಪಿ ಸದಸ್ಯ ಶಫೀವುಲ್ಲಾಖಾನ್, ಕಾಂಗ್ರೆಸ್ ಮುಖಂಡರಾದ ರಾಜುಗೌಡ ಬಾದರ್ಲಿ, ಎಂ.ಲಿಂಗಪ್ಪ ದಢೇಸೂಗುರು, ಎನ್.ಅಮರೇಶ, ಖಾಜಿಮಲಿಕ್ ವಕೀಲ, ಸೈಯದ್ ಹಾರೂನ್‌ಪಾಷಾ ಜಾಹಗೀರ್‌ದಾರ್, ಶಬ್ಬೀರ್ ಅಹ್ಮದ್ ನಾಯಕ ಸೇರಿದಂತೆ ಉಮ್ರಾ ಯಾತ್ರಾರ್ಥಿಗಳು ಇದ್ದರು.

ನಂತರ ಮೌಲಾನಾ ಅಜರುದ್ದೀನ್ ರಬ್ಬನಾ ನೇತೃತ್ವದಲ್ಲಿ ಸಿಂಧನೂರು ತಾಲ್ಲೂಕಿನ 70 ಜನರು ಉಮ್ರಾ ಪ್ರವಾಸ ಕೈಗೊಂಡರು

## ಜ್ಯೋತಿ ಪ್ರಕರಣ ಹುಬ್ಬಳ್ಳಿ ಮರ್ಯಾದೆ ಹತ್ಯೆ: ದಸಂಸ ಪ್ರತಿಭಟನೆ

ಧೈರ್ಯದ ದಾರಿ



**ಕವಿತಾಳ:ಡಿ30:** ಲಿಂಗಸುಗೂರು ತಾಲೂಕಿನ ಹಟ್ಟಿ ಚಿನ್ನದ ಗಣಿ ವ್ಯಾಪ್ತಿಯಲ್ಲಿ ನಡೆದ ಸ್ಟಾಫ್ ನರ್ಸ್ ಕುಮಾರಿ ಜ್ಯೋತಿ ಅವರ ಅನುಮಾನಾಸ್ಪದ ಸಾವನ್ನು ಕೊಲೆ ಪ್ರಕರಣವಾಗಿ ಪರಿಗಣಿಸಿ ನಿಜವಾದ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಹಾಗೂ ಹುಬ್ಬಳ್ಳಿಯಲ್ಲಿ ನಡೆದ ಮರ್ಯಾದೆ ಹತ್ಯೆ ಪ್ರಕರಣದಲ್ಲಿ ದೋಷಿಗಳಿಗೆ ಅತ್ಯಂತ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿ ದಲಿತ ಸಂರಕ್ಷ ಸಮಿತಿ ಪ್ರತಿಭಟನೆ ನಡೆಸಿತು.
ಪ್ರತಿಭಟನೆಯಲ್ಲಿ ಮಾತನಾಡಿದ ನಾಯಕರು, ಜ್ಯೋತಿ ಅವರ ಸಾವು ಆತ್ಮಹತ್ಯೆಯಲ್ಲ, ಜಾತಿ ದ್ವೇಷದಿಂದ ನಡೆದ ಹತ್ಯೆಯೇ ಎಂಬ ಗಂಭೀರ ಅನುಮಾನಗಳು ಇದ್ದು, ಈ ಪ್ರಕರಣವನ್ನು ಎಸ್ಸಿ/ಎಸ್ಟಿ (ಅತ್ಯಾಚಾರ ತಡೆ) ಕಾಯ್ದೆಯಡಿ ದಾಖಲಿಸಿ ವೇಗದ ತನಿಖೆ ನಡೆಸಬೇಕೆಂದು ಆಗ್ರಹಿಸಿದರು. ಜ್ಯೋತಿ ಅವರ ಕುಟುಂಬಕ್ಕೆ ಸರ್ಕಾರದಿಂದ ಯೋಗ್ಯ ಪರಿಹಾರ ಹಾಗೂ ಭದ್ರತೆ ನೀಡಬೇಕೆಂದೂ ಮನವಿ ಮಾಡಿದರು.
ಇದೇ ವೇಳೆ, ಅನ್ಯಜಾತಿ ವಿವಾಹದ ಕಾರಣಕ್ಕೆ 7 ತಿಂಗಳ ಗರ್ಭಿಣಿಯಾಗಿದ್ದ ದಲಿತ ಮಹಿಳೆಯನ್ನು ಕೊಲೆಗೈದ ಹುಬ್ಬಳ್ಳಿ ಮರ್ಯಾದೆ ಹತ್ಯೆ ಪ್ರಕರಣವನ್ನು ಮಾನವೀಯತೆಗೆ ವಿರೋಧವಾದ ಅಮಾನುಷ ಕೃತ್ಯವೆಂದು ಪ್ರತಿಭಟನಾಕಾರರು ಖಂಡಿಸಿದರು.
ಇಂತಹ ಜಾತಿ ಆಧಾರಿತ ಹತ್ಯೆಗಳು 2ನೇಪುಟಕ್ಕೆ►

## ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಸಹಾಯಧನಕ್ಕೆ ಅರ್ಜಿ ಆಹ್ವಾನ

**ರಾಯಚೂರು ಡಿ,30-**ಇಲ್ಲಿನ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ 2025-26ನೇ ಸಾಲಿನ ನೇಕಾರರ ಪ್ಯಾಕೇಜ್ ಯೋಜನೆಯಡಿ ಎಸ್.ಸಿ.ಎಸ್.ಪಿ, ಟಿ.ಎಸ.ಪಿ, ಎಸ್‌ಎಮ್‌ಇ ಯೋಜನೆಯಡಿ ಸಹಾಯಧನಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.
ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದ ವೈಯಕ್ತಿಕ ಫಲಾನುಭವಿ/ಪಾಲುದಾರಿಕೆ ಸಂಸ್ಥೆ/ಕಂಪನಿ/ಜವಳಿ ಸಹಕಾರಿ ಸಂಘ/ಸಂಸ್ಥೆಗಳು ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿಸಣ್ಣ (ಎಸ್.ಎಮ್.ಇ) ಘಟಕಗಳನ್ನು ಪ್ರಾರಂಭಿಸುವುದನ್ನು ಉತ್ತೇಜಿಸಲು ಯಂತ್ರೋಪಕರಣಗಳೊಂದಿಗೆ ಸ್ಥಾಪಿಸುವ ಜವಳಿ ಘಟಕಗಳಿಗೆ ಸರ್ಕಾರದಿಂದ ಶೇ.75ರಷ್ಟು ಬಂಡವಾಳ ಹೂಡಿಕೆ ಸಹಾಯಧನ ಒದಗಿಸುವ ಯೋಜನೆಯನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.
ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದ ವೈಯಕ್ತಿಕ ಫಲಾನುಭವಿ/ಪಾಲುದಾರಿಕೆ ಸಂಸ್ಥೆ/ಕಂಪನಿ/ಜವಳಿ ಸಹಕಾರಿ ಸಂಘ/ಸಂಸ್ಥೆಯ ವತಿಯಿಂದ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಮ್.ಇ) ಘಟಕಗಳನ್ನು ಸ್ಥಾಪಿಸಲು ಆಸಕ್ತ ಉದ್ದಿಮೆದಾರರಿಂದ ಪೂರ್ಣ ಪ್ರಮಾಣದ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು 2026ರ ಜನವರಿ 23ರೊಳಗಾಗಿ ಸಲ್ಲಿಸಬಹುದಾಗಿದೆ.
ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರವರ ಕಚೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಉರ್ದು ಶಾಲೆಯ ಹತ್ತಿರ, ಅರಬ್ ಮೊಹಲ್ಲಾ ರಾಯಚೂರು. ಅಥವಾ ದೂರವಾಣಿ ಸಂಖ್ಯೆ:08532-233429ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗುತ್ತಿಗೆದಾರರಿಂದ ನಗದು ಹಣ ಪಡೆಯದೇ ಆಹಾರ ಪದಾರ್ಥಗಳನ್ನು ಪೂರೈಸುವಂತೆ ಅಗತ್ಯ ಕ್ರಮ ಕೈಗೊಳ್ಳಿ -ಶಾಸಕ ಆರ್.ಬಸನಗೌಡ ತುರ್ವಿಹಾಳ

ಧೈರ್ಯದ ದಾರಿ

**ಮಸ್ಕಿ : ಡಿ 30:** ಪಟ್ಟಣದಲ್ಲಿರುವ ವಿವಿಧ ಇಲಾಖೆಗಳ ವಸತಿ ನಿಲಯಗಳಲ್ಲಿ ರಾತ್ರಿ ವೇಳೆ ಕಡ್ಡಾಯವಾಗಿ ವಾಸ ಮಾಡಬೇಕೆಂದು ಖಾದಿ ಮತ್ತು ಗ್ರಾಮದ್ಯೋಗ ಮಂಡಳಿ ಅಧ್ಯಕ್ಷರು ಹಾಗೂ ಶಾಸಕರಾದ ಆರ್.ಬಸನಗೌಡ ತುರವಿಹಾಳ ತಾಕೀತು ಮಾಡಿದ್ದಾರೆ.
ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ವಿವಿಧ ಇಲಾಖೆಗಳ ತಾಲೂಕಾಧಿಕಾರಿಗಳ ಮತ್ತು ವಸತಿ ನಿಲಯಗಳ ನಿಲಯಪಾಲಕರ ಮತ್ತು ವಸತಿ ಶಾಲೆಗಳ ಪ್ರಾಂಶುಪಾಲರ ಸಭೆಯನ್ನು ಮಂಗಳವಾರ ನಡೆಸಿದರು. ಸಭೆಯಲ್ಲಿ ಮಾತನಾಡಿದ ಅವರು ವಸತಿ ನಿಲಯಗಳಲ್ಲಿ ವಾರ್ಡನಗಳು ಕಡ್ಡಾಯವಾಗಿ ವಾಸ ಮಾಡಬೇಕು. ವಸತಿ ನಿಲಯುಗಳಿಗೆ ಆಹಾರ ಪದಾರ್ಥಗಳನ್ನು ಪೂರೈಸುತ್ತಿರುವ ಗುತ್ತಿಗೆದಾರರಿಂದ ನಗದು



ಹಣವನ್ನು ಪಡೆಯದೇ ಆಹಾರ ಪದಾರ್ಥಗಳನ್ನು ಪೂರೈಸುವಂತೆ ತಾಲೂಕು ಅಧಿಕಾರಿಗಳು ಗುತ್ತಿಗೆದಾರರಿಗೆ ಸೂಚಿಸಬೇಕು. ವಸತಿ ನಿಲಯಗಳಿಗೆ ಇನ್ಮೂಂದೆ ಆಹಾರ ಪದಾರ್ಥಗಳನ್ನು ಗುತ್ತಿಗೆ ಪಡೆದ ಗುತ್ತಿಗೆದಾರರು ಆಹಾರ ಸಾಮಾಗ್ರಿಗಳನ್ನೇ ಪೂರೈಸುವಂತೆ ತಾಲೂಕು ಅಧಿಕಾರಿಗಳು ಸೂಚಿಸಬೇಕು. 2ನೇಪುಟಕ್ಕೆ►

# ವಿದ್ಯಾರ್ಥಿಗಳ ಕಲ್ಪನೆಗೆ ರೂಪ ನೀಡಿ ಭವಿಷ್ಯದ ನಾವೀನ್ಯತೆಗೆ ದಾರಿ ತೆರೆದ ಆವಿಷ್ಕಾರ ಮೇಳ



**ಗುರುಮಠಕಲ್:ಡಿ.30**: ಮಿನಿ ನಾವಿನ್ಯತೆ ಕೇಂದ್ರದ ವತಿಯಿಂದ ಆವಿಷ್ಕಾರ ಮೇಳ ಯಶಸ್ವಿ

ಸಮಗ್ರ ಶಿಕ್ಷಣ ಕರ್ನಾಟಕ, ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಂಸ್ಕೃತಿಕ ಸಂಘ (ರಿ) ಅಗಸ್ತ್ಯ ಅಂತರಾಷ್ಟ್ರೀಯ ಪ್ರತಿಷ್ಠಾನ ಆಶ್ರಯದಲ್ಲಿ ಮಿನಿ ನಾವಿನ್ಯತೆ ಕೇಂದ್ರ, ಗುರುಮಠಕಲ್ ವತಿಯಿಂದ ಇಂದು ಡಿ. 29-2025 ರಂದು ಗುರುಮಠಕಲ್ ತಾಲ್ಲೂಕಿನ ಸರಕಾರಿ ಪ್ರೌಢಶಾಲೆ ಪುಟಪಾಕ್ ಶಾಲೆಯಲ್ಲಿ ಆವಿಷ್ಕಾರ ಮೇಳ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯ ಗುರುಗಳಾದ ಶ್ರೀಮತಿ ಹೇಮಲತಾ ಶೆಟ್ಟಿ ಅವರು ವಹಿಸಿಕೊಂಡಿದ್ದರು, ಮುಖ್ಯ ಅತಿಥಿಗಳಾಗಿ ಶ್ರೀನಿವಾಸ ರೆಡ್ಡಿ, ಶಿವರಾಜ ಸಾಕ, ಅಶೋಕ ಕುಮಾರ, ಕಾಶಿನಾಥ, ನರಸಪ್ಪ, ನಾಗರಾಜ, ಬಸವರಾಜ ಹಾಗೂ ದೀಪಾಕ್ ಅವರು ಹಾಗೂ ಮಿನಿ ನಾವಿನ್ಯತೆ ಕೇಂದ್ರ ಗುರುಮಠಕಲ್‌ನ ಮುಖ್ಯಸ್ಥರಾದ ನಾಗೇಶ್ ಡಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ನಾಗೇಶ್ ಡಿ ಅವರು ಮಾತನಾಡಿ ವಿನ್ಯಾಸ ಚಿಂತನೆಯ ಪ್ರಕ್ರಿಯೆಯ ವಿವಿಧ ಹಂತಗಳನ್ನು ಆಧರಿಸಿ ಈ ಆವಿಷ್ಕಾರ ಮೇಳವನ್ನು ಆಯೋಜಿಸಿರುವುದು ಸಂತೋಷದ ವಿಷಯುವಾಗಿದ್ದು, ವಿದ್ಯಾರ್ಥಿಗಳು ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಕಂಡ ಸಮಸ್ಯೆಗಳಿಗೆ ಮಾದರಿಗಳ ಮೂಲಕ ಪರಿಹಾರ ಕಂಡುಕೊಂಡಿದ್ದಾರೆ ಹಾಗೂ ಮಕ್ಕಳಲ್ಲಿ ಅನ್ವೇಷಣೆಯ ಮನೋಭಾವನೆ ಮತ್ತು ಆವಿಷ್ಕಾರ ಚಿಂತನೆ ಬೆಳೆಸುವುದು ಇಂತಹ ಕಾರ್ಯಕ್ರಮಗಳ ಪ್ರಮುಖ ಉದ್ದೇಶವಾಗಿದೆ ಎಂದು ಅವರು ಹೇಳಿದರು. ಅಧ್ಯಕ್ಷತೆ ಭಾಷಣದಲ್ಲಿ ಮಾತನಾಡಿದ ಶ್ರೀಮತಿ ಹೇಮಲತಾ ಶೆಟ್ಟಿ ಮೇಡಂ ಅವರು, ಈ ರೀತಿಯ ಆವಿಷ್ಕಾರ ಮತ್ತು ವಿಜ್ಞಾನಾಧಾರಿತ ಕಾರ್ಯಕ್ರಮಗಳು ಮಕ್ಕಳ ಸೃಜನಶೀಲತೆಯನ್ನು ಹೆಚ್ಚಿಸುವುದರ ಜೊತೆಗೆ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಲು ಬಹಳ ಸಹಕಾರಿಯಾಗಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಆವಿಷ್ಕಾರ ಮೇಳದಲ್ಲಿ 8ನೇ ತರಗತಿ ವಿದ್ಯಾರ್ಥಿಗಳು ವಿನ್ಯಾಸ ಚಿಂತನೆ ಆಧಾರಿತ ಮಾದರಿಗಳನ್ನು ಹಾಗೂ 9ನೇ ತರಗತಿ ವಿದ್ಯಾರ್ಥಿಗಳು ವಿಜ್ಞಾನಕ್ಕೆ ಸಂಬಂಧಿಸಿದ ಮಾದರಿಗಳನ್ನು ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ವಿನ್ಯಾಸ ಚಿಂತನೆಯ ಮೂಲ ಮಾದರಿಗಳು ಸುಮಾರು 10 ರಿಂದ 15 ಹಾಗೂ ವಿಜ್ಞಾನ ಸಂಬಂಧಿತ 20 ರಿಂದ 30 ಮಾದರಿಗಳು ಸೇರಿದಂತೆ ಒಟ್ಟಾರೆ ಸುಮಾರು 50 ವಿಜ್ಞಾನ ಮಾದರಿಗಳ ಪ್ರದರ್ಶನ ನಡೆಯಿತು.

ಕಾರ್ಯಕ್ರಮದಲ್ಲಿ ಶಾಲೆಯ ಎಲ್ಲಾ ಸಿಬ್ಬಂದಿ ವರ್ಗದವರು ಸಕ್ರಿಯವಾಗಿ ಆವಿಷ್ಕಾರ ಮೇಳದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಿದರು.

# ವಿಶ್ವ ಭ್ರಾತೃತ್ವ ಸಾರಿದ ಮೇರು ದಾರ್ಶನಿಕ ರಾಷ್ಟ್ರಕವಿ ಕುವೆಂಪು



**ಕಲಬುರಗಿ:ಡಿ.30:** ಮಾನವ ಹುಟ್ಟುತ್ತಾ ವಿಶ್ವಮಾನವನಾಗಿ ಹುಟ್ಟುತ್ತಾನೆ. ಬೆಳೆಯುತ್ತಲೇ ಆತ ಜಾತಿ, ಧರ್ಮಗಳು, ಮೌಢ್ಯತೆಯಂತಹ ಸಂಕೋಲೆಗಳಲ್ಲಿ ಸಿಲುಕಿ ಅಲ್ಪ ಮಾನವನಾಗುತ್ತಾನೆ. ಆತನಿಗೆ ಶಿಕ್ಷಣ, ಮೌಲ್ಯಗಳನ್ನು ನೀಡಿ ಪುನಃ ವಿಶ್ವಮಾನವನನ್ನಾಗಿ ಮಾಡುವ, ಸರ್ವರು ಸಮಾನರು ಎಂಬ ಭ್ರಾತೃತ್ವದ ಚಿಂತನೆ ಸಾರಿದ ಮೇರು ದಾರ್ಶನಿಕ ರಾಷ್ಟ್ರಕವಿ ಕುವೆಂಪು ಅವರ ಕೊಡುಗೆ ಅನನ್ಯವಾಗಿದೆ ಎಂದು ಕಮಲಾಪುರ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಸುರೇಶ್ ಲೇಂಗಟಿ ಅಭಿಪ್ರಾಯಪಟ್ಟರು.

ಕಮಲಾಪುರ ತಾಲೂಕಿನ ನಾಗೂರ ಸರ್ಕಾರಿ ಪ್ರೌಢಶಾಲೆಯಲ್ಲಿ ಕಲಬುರಗಿಯ 'ಬಸವೇಶ್ವರ ಸಮಾಜ ಸೇವಾ ಬಳಗ' ಮತ್ತು ಕಸಾಪ ತಾಲೂಕಾ ಘಟಕದ ವತಿಯಿಂದ ಸೋಮವಾರ ಜರುಗಿದ ರಾಷ್ಟ್ರಕವಿ ಕುವೆಂಪುರವರ 121ನೇ ಜನ್ಮದಿನ-ವಿಶ್ವ ಮಾನವ ದಿನಚರಣೆ'ಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಉಪನ್ಯಾಸಕ, ಲೇಖಕ ಎಚ್.ಬಿ.ಪಾಟೀಲ ಮಾತನಾಡಿ, ಕುವೆಂಪು ಅವರು ಪ್ರತಿಯೊಬ್ಬರಲ್ಲಿಯೂ ಕನ್ನಡ ನಾಡು, ನುಡಿ, ಭಾಷೆ, ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅರಿವು ಮೂಡುವಂತೆ ತಮ್ಮದೇ ಆದ ಅನೇಕ ಮೌಲ್ಯಯುತ ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಕನ್ನಡಿಗರ ಸ್ವಾಭಿಮಾನವನ್ನು ಬಡೆದೆಬ್ಬಿಸಿದ ಮಹಾಕವಿಯಾಗಿದ್ದಾರೆ. ಇವರು ಮಾನವೀಯ ಮೌಲ್ಯಗಳ ಮಹಾನ ಚೇತನವಾಗಿದ್ದಾರೆ. ಮಹಾಕಾವ್ಯ, ನಾಟಕ, ಬಿಡಿ ಕವನ ಸಂಕಲನ, ಕಥಾ ಸಂಕಲನ, ಆತ್ಮಕಥೆ, ವಿಮರ್ಶೆ, ಜೀವನಚರಿತ್ರೆ, ವೈಚಾರಿಕ ಲೇಖನ ಹೀಗೆ ಬಹುಮುಖ ಸಾಹಿತ್ಯ ಕೃಷಿ ಮಾಡಿದ್ದಾರೆ. ಸರ್ಕಾರವು 2015ರಲ್ಲಿ ಕುವೆಂಪು ಅವರ ಜನ್ಮದಿನವನ್ನು 'ವಿಶ್ವ ಮಾನವ ದಿನ'ವನ್ನಾಗಿ ಆಚರಿಸುವ ಮೂಲಕ ಅವರ ಶ್ರೇಷ್ಟ ಚಿಂತನೆಗೆ ಗೌರವ ನೀಡಿರುವ ಕಾರ್ಯ ಅಮೋಘವಾಗಿದೆ ಎಂದರು.

ಶಾಲೆಯ ಮುಖ್ಯ ಶಿಕ್ಷಕ ಜಗನಾಥ ಎಂ.ಸಾತಲಗಾಂವ, ಕನ್ನಡ ಭಾಷಾ ಶಿಕ್ಷಕಿ ಜಲಜಾಕ್ಷಿ ಹಿರೇಮಠ ಮಾತನಾಡಿದರು. ನಾಗೂರ ಗ್ರಾಪಂ ಅಧ್ಯಕ್ಷ ಕಿರಣಕುಮಾರ ಹೊಸಮನಿ, ಕಸಾಪ ಕಲಬುರಗಿ ಉತ್ತರ ವಲಯದ ಗೌರವ ಅಧ್ಯಕ್ಷ ಶಿವಯೋಗೆಪ್ಪಾ ಎಸ್.ಬಿರಾದಾರ, ಪ್ರೌಢಶಾಲೆಯ ಶಿಕ್ಷಕರಾದ ಜಯಶ್ರೀ ಕೆ., ಮೌನೇಶ್ವರ ರೇಶ್ಮಿ, ನಿಂಗಪ್ಪ ನಾಗೂರೆ, ಸೇವಕಿ ಸಂಗೀತಾ ಗೌಳಿ, ಪ್ರಾಥಮಿಕ ಶಾಲೆಯ ಪ್ರಬಾರಿ ಮುಖ್ಯ ಶಿಕ್ಷಕ ವಿಶ್ವನಾಥ ರಾಠೋಡ, ಶಿಕ್ಷಕರಾದ ಅನ್ನಪೂರ್ಣ ಉಳಾಗಡ್ಡಿ, ಕಾವೇರಿ ಅಂಬಲಗಿ, ಉರ್ದು ಶಾಲೆಯ ಮುಖ್ಯ ಶಿಕ್ಷಕಿ ರಾಜೇಶ್ವರಿ ಬಿರಾದಾರ, ಶಿಕ್ಷಕಿ ಹೀನಾ ಕೌಸರ್, ಗ್ರಾಪಂ ಕಚೇರಿಯ ಸೇವಕ ಸಿದ್ದಲಿಂಗ ಪಡಶೆಟ್ಟಿ ಹಾಗೂ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿಗಳಿಗೆ ಕುವೆಂಪುರವರ ಪುಸ್ತಕಗಳನ್ನು ವಿತರಿಸಲಾಯಿತು.

# ಕನ್ನಡ ನಾಡಿಗೆ ಕುವೆಂಪು ಅವರ ಕೊಡುಗೆ ಅಪಾರ



**ಸೈದಾಪುರ:ಡಿ.30:**ಕನ್ನಡ ನಾಡು ನುಡಿಗೆ ರಾಷ್ಟ್ರಕವಿ ಕುವೆಂಪುರವರ ಕೊಡುಗೆ ಅಪಾರವಾಗಿದೆ ಎಂದು ಮುಖ್ಯಗುರು ಲಿಂಗಾರೆಡ್ಡಿ ನಾಯಕ ಅಭಿಪ್ರಾಯಪಟ್ಟರು.

ಪಟ್ಟಣದ ವಿದ್ಯಾ ವರ್ಧಕ ಸಂಸ್ಥೆಯ ವಿವಿಧ ವಿಭಾಗಗಳಿಂದ ಹಮ್ಮಿಕೊಂಡ ವಿಶ್ವಮಾನವ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಜೈ ಭಾರತ ಜನನಿಯ ತನುಜಾತೆ ಜಯ ಹೇ ಕರ್ಣಾಟಕ ಮಾತೆ ಎಂದು ಮೊಳಗುವ ನಾಡಗೀತೆಯಿಂದ ಹಿಡಿದು ಶ್ರೀ ರಾಮಾಯಣ ದರ್ಶನಂ ಎಂಬ ಪ್ರಮುಖ ಗ್ರಂಥ ರಚನೆಯ ಕೀರ್ತಿ ಸೇರಿದಂತೆ ಕನ್ನಡ ನಾಡಿಗೆ ಮೊಟ್ಟ ಮೊದಲ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಗರಿಮೆ ಕುವೆಂಪು ಅವರಿಗೆ ಸಲ್ಲುತ್ತದೆ. ಸಾಕಷ್ಟು ಕೃತಿ, ಕಥೆ, ಕಾದಂಬರಿಗಳನ್ನು ರಚಿಸಿದ್ದಾರೆ. ನಾಡು, ನುಡಿಯ ಬಗಗೆ ಅವರಲ್ಲಿರುವ ಅಭಿಮಾನ ನಮಗೆ ಮಾದರಿಯಾಗಬೇಕು ಎಂದು ಹೇಳಿದರು. ಪ್ರಾಂಶುಪಾಲ ಹಂಪಣ್ಣ ಸಜ್ಜನಶೆಟ್ಟಿ, ಕರಬಸಯ್ಯ ದಂಡಿಗಿಮಠ, ಸಾಬಯ್ಯ ರಾಯಪನ್ನೋರ, ರಾಚಯ್ಯ ಸ್ವಾಮಿ ಬಾಡಿಯಾಲ, ಚಂದ್ರಶೇಖರ ಡೊಣ್ಣೆಗೌಡ ಸೇರಿದಂತೆ ಇತರರಿದ್ದರು.

## ಮೊದಲನೇ ಪುಟದಿಂದ

# ಬಾಂಗ್ಲಾದೇಶ ಮಾಜಿ ಪ್ರಧಾನಿ ಖಲೀದಾ ಜಿಯಾ ನಿಧನ

ಮೇ 30, 1981 ರಂದು ವಿಫಲವಾದ ಸೇನಾ ದಂಗೆಯಲ್ಲಿ ಅವರ ಪತಿ, ಮಿಲಿಟರಿ ಬಲಶಾಲಿ ರಾಜಕಾರಣಿಯಾಗಿ ಬದಲಾದ ಅಧ್ಯಕ್ಷ ಜಿಯಾವುರ್ ರೆಹಮಾನ್ ಅವರ ಹತ್ಯೆಯ ನಂತರ ಜಿಯಾವನ್ನು ರಾಜಕೀಯ ಜಗತ್ತಿನೊಳಗೆ ಎಳೆಯುವವರೆಗೂ ಅವರು ಹೆಚ್ಚಾಗಿ ಪರಿಚಯವಿರಲಿಲ್ಲ.

ಇದಕ್ಕೂ ಮೊದಲು, ಅವರನ್ನು ಕೇವಲ ಜನರಲ್ ಮತ್ತು ನಂತರ ಪ್ರಥಮ ಮಹಿಳೆಯ ಪತ್ನಿ ಎಂದು ಪರಿಗಣಿಸಲಾಗಿತ್ತು. ಆದಾಗ್ಯೂ, ಅವರು 1978 ರಲ್ಲಿ ಅವರ ಪತಿ ಸ್ಥಾಪಿಸಿದ ಪಕ್ಷವಾದ ಬಿಎನ್‌ಪಿಯ ಉನ್ನತ ನಾಯಕಿಯಾಗಿ ತಮ್ಮ ಛಾಪು ಮೂಡಿಸಿದರು.ಜನವರಿ 3, 1982 ರಂದುಪ್ರಾಥಮಿಕ ಸದಸ್ಯತ್ವ ಪಡೆದು ಮುಂದಿನ ವರ್ಷದ ಮಾರ್ಚ್ ವೇಳೆಗೆ, ಅವರು ಪಕ್ಷದ ಉಪಾಧ್ಯಕ್ಷರಾದರು ಮತ್ತು ಮೇ 1984 ರಲ್ಲಿ, ಬಿಎನ್‌ಪಿಯ ಅಧ್ಯಕ್ಷೆಯಾಗಿ ಅಧಿಕಾರ ವಹಿಸಿಕೊಂಡು ಕೊನೆಯುಸಿರನವರೆಗೂ ಈ ಹುದ್ದೆಯನ್ನು ಹೊಂದಿದ್ದರು.

ಈ ಅವಧಿಯಲ್ಲಿ ಅವರ ಪ್ರಮುಖ ಪ್ರತಿಸ್ಪರ್ಧಿ ಅವಾಮಿ ಲೀಗ್‌ನ ಮುಖ್ಯಸ್ಥೆ ಶೇಖ್ ಹಸೀನಾ ಕಾಣಿಸಿಕೊಂಡಿದ್ದರು. 1982 ರಲ್ಲಿ ಆಗಿನ ಸೇನಾ ಮುಖ್ಯಸ್ಥ ಜನರಲ್ ಎಚ್.ಎಂ. ಎರ್ಷಾದ್ ನಡೆಸಿದ ಮಿಲಿಟರಿ ದಂಗೆಯ ನಂತರ, ಜಿಯಾ ಪ್ರಜಾಪ್ರಭುತ್ವವನ್ನು ಪುನಃಸ್ಥಾಪಿಸಲು ಒಂದು ಆಂದೋಲನವನ್ನು ಪ್ರಾರಂಭಿಸಿದರು.

1986 ರಲ್ಲಿ, ಜಿಯಾ ಅವರ ಬಿಎನ್ಪಿ ನೇತೃತ್ವದ ಮೈತ್ರಿಕೂಟ ಮತ್ತು ಹಸೀನಾ ಅವರ ಅವಾಮಿ ಲೀಗ್ ನೇತೃತ್ವದ 15-ಪಕ್ಷಗಳ ಒಕ್ಕೂಟದ ಏಕಕಾಲದಲ್ಲಿ ಪ್ರಚಾರಗಳ ನಡುವೆ ಎರ್ಷಾದ್ ಅಧ್ಯಕ್ಷೀಯ ಚುನಾವಣೆಯನ್ನು ಘೋಷಿಸಿದರು.ಎರಡೂ ಮೈತ್ರಿಕೂಟಗಳು ಆರಂಭದಲ್ಲಿ ಚುನಾವಣೆಯನ್ನು ಬಹಿಷ್ಕರಿಸಲು ನಿರ್ಧರಿಸಿದವು, ಆದರೆ ಅವಾಮಿ ಲೀಗ್, ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಪಕ್ಷಗಳೊಂದಿಗೆ ಅಂತಿಮವಾಗಿ ಭಾಗವಹಿಸಿತು.ಜಿಯಾ ಅವರ ಮೈತ್ರಿಕೂಟವು ಬಹಿಷ್ಕಾರಕ್ಕೆ ಅಂಟಿಕೊಂಡಿತು, ಮತ್ತು ಎರ್ಷಾದ್ ಮಾರ್ಚ್ ಚುನಾವಣೆಗೆ ಮುನ್ನ ವಂಚನೆ ಪ್ರಕರಣದಲ್ಲಿ ಮೊದಲು ಹಸೀನಾ ಅವರನ್ನು ಗೃಹಬಂಧನದಲ್ಲಿ ಇರಿಸಿದರು.

ಡಿಸೆಂಬರ್ 1990 ರಲ್ಲಿ ಎರ್ಷಾದ್ ಆಡಳಿತದ ಪತನದ ನಂತರ, ಮುಖ್ಯ ನ್ಯಾಯಮೂರ್ತಿ ಶಹಾಬುದ್ದೀನ್ ಅಹ್ಮದ್ ನೇತೃತ್ವದ ಉಸ್ತುವಾರಿ ಸರ್ಕಾರವು ಫೆಬ್ರವರಿ 1991 ರಲ್ಲಿ ಚುನಾವಣೆಗಳನ್ನು ನಡೆಸಿತು.ಅವಾಮಿ ಲೀಗ್ ಚುನಾವಣೆಯಲ್ಲಿ ಗೆಲ್ಲುತ್ತದೆ ಎಂದು ನಂಬಿದ್ದ ಅನೇಕರನ್ನು ಅಚ್ಚರಿಗೊಳಿಸುವಂತೆ ಬಿಎನ್‌ಪಿ ಬಹುಮತದೊಂದಿಗೆ ಪಕ್ಷವಾಗಿ ಹೊರಹೊಮಿತು. ಹೊಸ ಸಂಸತ್ತು ಸಂವಿಧಾನವನ್ನು ತಿದ್ದುಪಡಿ ಮಾಡಿತು, ಅಧ್ಯಕ್ಷೀಯ ಸರ್ಕಾರದಿಂದ ಸಂಸದೀಯ ವ್ಯವಸ್ಥೆಗೆ ಬದಲಾಯಿತು, ಮತ್ತು ಜಿಯಾ ಬಾಂಗ್ಲಾದೇಶದಲ್ಲಿ ಮೊದಲ ಮಹಿಳಾ ಪ್ರಧಾನಿಯಾದರು ಮತ್ತು ಪಾಕಿಸ್ತಾನದ ಬೆನಜೀರ್ ಭುಟ್ಟೊ ನಂತರ ಮುಸ್ಲಿಂ ಜಗತ್ತಿನಲ್ಲಿ ಎರಡನೇ ಸ್ಥಾನ ಪಡೆದರು.1996 ರಲ್ಲಿ ಬಿಎನ್‌ಪಿ ಮತ್ತೆ ಅಧಿಕಾರಕ್ಕೆ ಬಂದಿತು, ಆದರೆ ಅವಾಮಿ ಲೀಗ್ ಹೋರಾಟದ ಫಲವಾಗಿ ಜಿಯಾ ರಾಜೀನಾಮೆ ನೀಡಿದ್ದರು.ಜೂನ್ 1996 ರಲ್ಲಿ ನಡೆದ ಹೊಸ ಚುನಾವಣೆಯಲ್ಲಿ ಬಿಎನ್‌ಪಿ ಸೋತರೂ, ಪಕ್ಷವು 116 ಸ್ಥಾನಗಳನ್ನು ಗೆದಿತ್ತು.

1999 ರಲ್ಲಿ, ಜಿಯಾ ನಾಲ್ಕು ಪಕ್ಷಗಳ ಒಕ್ಕೂಟವನ್ನು ರಚಿಸಿ ಆಗಿನ ಆಡಳಿತ ನಡೆಸುತ್ತಿದ್ದ ಅವಾಮಿ ಲೀಗ್ ಸರ್ಕಾರವನ್ನು ವಿರೋಧಿಸಿ ಆಂದೋಲನಗಳನ್ನು ಪ್ರಾರಂಭಿಸಿದರು. ಅವರು 2001 ರಲ್ಲಿ ಮತ್ತೆ ಆಯ್ಕೆಯಾದರು.ನಂತರ 2006 ರಲ್ಲಿ, ಅವರು ಅಧಿಕಾರದಿಂದ ಕೆಳಗಿಳಿದು, ಅಧಿಕಾರವನ್ನು ಉಸ್ತುವಾರಿ ಆಡಳಿತಕ್ಕೆ ವರ್ಗಾಯಿಸಿದರು.ಸೆಪ್ಟೆಂಬರ್ 2007 ರಲ್ಲಿ, ಅವರ ಪಕ್ಷವು ಆಧಾರರಹಿತ ಭ್ರಷ್ಟಾಚಾರದ ಆರೋಪಗಳ ಮೇಲೆ ಅವರನ್ನು ಬಂಧಿಸಲಾಯಿತು.1991, 1996 ಮತ್ತು 2001 ರ ಚುನಾವಣೆಗಳಲ್ಲಿ ಐದು ಪ್ರತ್ಯೇಕ ಸಂಸದೀಯ ಕ್ಷೇತ್ರಗಳಲ್ಲಿ ಅವರು ಆಯ್ಕೆಯಾದರು, ಆದರೆ 2008 ರಲ್ಲಿ, ಅವರು ಸ್ಪರ್ಧಿಸಿದ ಮೂರು ಕ್ಷೇತ್ರಗಳಲ್ಲಿ ಗೆದ್ದರು ಎಂದು ಬಿಎನ್‌ಪಿ ನಾಯಕಿಯೊಬ್ಬರು ಹೇಳಿದರು.ಜಿಯಾ ಆಗಸ್ಟ್ 15, 1946 ರಂದು ಅವಿಭಜಿತ ಭಾರತದ ದಿನಜ್‌ಪುರ ಜಿಲ್ಲೆಯ ತೈಯಾಬಾ ಮತ್ತು ಇಸ್ಕಂದರ್ ಮಜುಂದಾರ್ ದಂಪತಿಗಳಿಗೆ ಜನಿಸಿದರು. ಅವರ ತಂದೆ ಕುಟುಂಬವು ಚಹಾ ವ್ಯಾಪಾರ ನಡೆಸುತ್ತಿದ್ದ ಜಲ್‌ಪೈಗುರಿಯಿಂದ ವಿಭಜನೆಯ ನಂತರ ಪೂರ್ವ ಪಾಕಿಸ್ತಾನಕ್ಕೆ ವಲಸೆ ಬಂದರು.1960 ರಲ್ಲಿ, ಅವರು ಬಾಂಗ್ಲಾದೇಶದ ಅಧ್ಯಕ್ಷರಾದ ಸೇನಾ ಕ್ಯಾಪ್ಟನ್ ಜಿಯಾವುರ್ ರೆಹಮಾನ್ ಅವರನ್ನು ವಿವಾಹವಾದರು.

1983 ರಲ್ಲಿ ಜಿಯಾ ಬಿಎನ್‌ಪಿಯ ಮುಖ್ಯಸ್ಥರಾದಾಗ, ಅದರ ಅನೇಕ ನಾಯಕರು ಮತ್ತು ಬೆಂಬಲಿಗರು ಹೊಸ ಅಧ್ಯಕ್ಷರ ಬಗ್ಗೆ ಖಚಿತವಾಗಿರಲಿಲ್ಲ. ಹೆಚ್ಚುವರಿಯಾಗಿ, 1982 ರ ದಂಗೆಯ ಸಮಯದಲ್ಲಿ ಪಕ್ಷವನ್ನು ಪದಚ್ಯುತಗೊಳಿಸುವುದು ಬಿಎನ್‌ಪಿಯನ್ನು ರಾಜಕೀಯ ನಿರ್ಜನ ಸ್ಥಿತಿಯಲ್ಲಿ ಬಿಟ್ಟಿತ್ತು.ಆದಾಗ್ಯೂ, ಅವರು ಪಕ್ಷವನ್ನು ಬಲಪಡಿಸಿದರು ಮತ್ತು ಅವಾಮಿ ಲೀಗ್ ಜೊತೆಗೆ ಎರ್ಷಾದ್ ಆಡಳಿತದ ವಿರುದ್ಧ ಸುದೀರ್ಘ ಅಭಿಯಾನವನ್ನು ನಡೆಸುವಲ್ಲಿ ಅದನ್ನು ಮುನ್ನಡೆಸಿದರು.

# ಅಬಕಾರಿ ಇಲಾಖೆಯಿಂದ ಸಿಹೆಚ್ ಪೌಡರ್, ಕಲಬೆರೆಕೆ ಸೇಂದಿ ದುಷ್ಪರಿಣಾಮದ ಅರಿವು ಕಾರ್ಯಕ್ರಮ

ಮುಂತಾದ ಮಾದಕ ವಸ್ತುಗಳ ಉತ್ಪಾದನೆ, ತಯಾರಿಸುವಿಕೆ, ಕಳ್ಳಸಾಗಾಣೆ ಮತ್ತು ಮಾರಾಟ ಮುಂತಾದ ಕಾನೂನು ಬಾಹಿರ ಚಟುವಟಿಕೆಗಳನ್ನು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಪೋಲಿಸ್ ಇಲಾಖೆ, ಅಬಕಾರಿ ಇಲಾಖೆ, ಎನ್.ಸಿ.ಬಿ ಹಾಗೂ ರಾಜ್ಯ ಮತ್ತು ಕೇಂದ್ರ ಸರಕಾರಗಳು ನೇಮಿಸಿರುವಂತಹ ಏಜೆನ್ಸಿಗಳು ಕಾರ್ಯ ಪ್ರವೃತ್ತವಾಗಿವೆ. ಇತ್ತಿಚಿನ ದಿನಗಳಲ್ಲಿ ರಾಯಚೂರು ನಗರ ಮತ್ತು ಗ್ರಾಮೀಣ ಪ್ರದೇಶ ಗಳಲ್ಲಿ ಸೇಂದಿ ಮಾರಾಟಕ್ಕೆ ಸಂಬಂಧಪಟ್ಟಂತ ಪ್ರಕರಣಗಳನ್ನು ಪತ್ತೆ ಹಚ್ಚಿ ಆರೋಪಿತರನ್ನು ಬಂಧಿಸಿ ಕ್ರಮ ಜರುಗಿಸಲಾಗಿದೆ. ಅಕ್ರಮ ಚಟುವಟಿಕೆಯಲ್ಲಿ ತೊಡಗಿದ್ದಲ್ಲಿ ಏನೆಲ್ಲಾ ಶಿಕ್ಷೆ, ದಂಢನೆಗಳಿವೆ ಎಂದು ಸಹವಿವರವಾಗಿ ಕಾನೂನಿನ ಅರಿವು ಮೂಡಿಸಿ ದರು. ಅಲ್ಲದೆ ಸೇಂದಿ ಹಾಗೂ ಮಾದಕ ವಸ್ತು ಸಂಬಂಧಿ ಅಪರಾಧಗಳು ಕಂಡು ಬಂದ ಪಕ್ಷದಲ್ಲಿ ಪೋಲಿಸ್ ಮತ್ತು ಅಬಕಾರಿ ಇಲಾಖೆಗೆ ಮಾಹಿತಿ ಯನ್ನು ನೀಡಿ ಅಪರಾಧಗಳನ್ನು ತಡೆಯುವಲ್ಲಿ ಸಹಕರಿಸುವಂತೆ ಕೋರಿದರು.ಈ ವೇಳೆ ಅಬಕಾರಿ ನಿರೀಕ್ಷಕರಾದ ಸರಸ್ವತಿ ಅವರು ಮಾತನಾಡಿ, ಹವ್ಯಾಸಗಳು ಯುವ ಜನತೆಗೆ ಬದುಕನ್ನು ಕಟ್ಟಿಕೊಡುತ್ತವೆ. ಮತ್ತು ಚಟಗಳು ಬದುಕನ್ನು ಕೆಡಿಸುತ್ತವೆ. ಆದುದ್ದರಿಂದ ಇಂದಿನ ಯುವ ಜನತೆ ಸಂಗೀತ, ಸಾಹಿತ್ಯ ರಚನೆ, ಕ್ರೀಡೆ ಮುಂತಾದ ಒಳ್ಳೆ ಹವ್ಯಾಸಗಳನ್ನು ಬೆಳೆಸಿಕೊಂಡು ಒಳ್ಳೆಯ ರೀತಿಯ ಸಾಧನೆ ಮಾಡಿ ಬದುಕು ರೂಪಿಸಿಕೊಳ್ಳಬೇಕು. ಮತ್ತು ಕುಟುಂಬಕ್ಕೆ ಹಾಗೂ ಸಮಾಜಕ್ಕೆ ಆಸ್ತಿಯಾಗಿ ಬೆಳೆಯಬೇಕು ಎಂದರು.ಮಾನಸಿಕ ಆರೋಗ್ಯ ಮತ್ತು ದೈಹಿಕ ಆರೋಗ್ಯವನ್ನು ಹಾಳು ಮಾಡುವ ಕೆಟ್ಟ ಚಟಗಳ ಹಿಂದೆ ಬಿದ್ದು ಸುಂದರ ಭವಿಷ್ಯವನ್ನು ಹಾಳುಮಾಡಿಕೊಂಡು ಕುಟುಂಬ ಸಮಾಜಕ್ಕೆ ಹೊರೆಯಾಗಬಾರದು ಎಂದು ಯುವಕರಿಗೆ ಕಿವಿಮಾತು ಹೇಳಿದರು.

ಇದೇ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ತಿಮ್ಮಪ್ಪ ನಾಯಕ, ಎಸ್.ಡಿ.ಎಮ್.ಸಿ ಉಪಾಧ್ಯಕ್ಷರಾದ ರಾಜಶೇಖರ ಯಕ್ಲಾಸ್‌ಪೂರ, ಅಬಕಾರಿ ಇಲಾಖೆಯ ಅಬಕಾರಿ ನಿರೀಕ್ಷಕರಾದ ಸತ್ಯನಾರಾಯಣ, ಅಬಕಾರಿ ಉಪ ನಿರೀಕ್ಷಕರಾದ ಯಲ್ಲನಾರಿಲು, ಮಹ್ಮದ್ ಹುಸೇನ್, ಅಮೃತ ಬಿಂದು ಸಿಬ್ಬಂದಿಗಳಾದ ಚಂದ್ರಕಾಂತ, ಶಿವಾನಂದ, ತಿರುಪತಿ, ಯಂಕೋಬ ಸೇರಿದಂತೆ ಇತರರು ಇದ್ದರು.

# ಜ್ಯೋತಿ ಪ್ರಕರಣ ಹುಬ್ಬಳ್ಳಿ ಮರ್ಯಾದೆ ಹತ್ಯೆ: ದಸಂಸ ಪ್ರತಿಭಟನೆ

ಮರುಕಳಿಸದಂತೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆ ಬಳಿಕ ದಲಿತ ಸಂಘರ್ಷ ಸಮಿತಿ ವತಿಯಿಂದ ಜಿಲ್ಲಾಡಳಿತಕ್ಕೆ ಮನವಿ ಪತ್ರ ಸಲ್ಲಿಸಿ, ಎರಡೂ ಪ್ರಕರಣಗಳಲ್ಲಿ ನಿಷ್ಪಕ್ಷಪಾತ ತನಿಖೆ, ಆರೋಪಿಗಳ ತಕ್ಷಣದ ಬಂಧನ ಹಾಗೂ ದೋಷಿಗಳಿಗೆ ಕಠಿಣ ಶಿಕ್ಷೆ ವಿಧಿಸುವ ಮೂಲಕ ದಲಿತ ಸಮುದಾಯಕ್ಕೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಲಾಯಿತು.

ಕಂದಾಯ ಇಲಾಖೆಯ ಅಧಿಕಾರಿ ವಿಜಯಲಕ್ಷ್ಮಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಹುಚ್ಚಪ್ಪ ಬುಳ್ಳಾಪುರು, ಬಾಲಸ್ವಾಮಿ ಜಿನಾಪುರು, ಈರಪ್ಪ ಕೆಳಗೇರಿ, ಅರಳಪ್ಪ ತೂಪ್ಪದೂರು, ಹೆಚ್ ಬಸವರಾಜು, ಹುಲಗಪ್ಪ ಯಕ್ಲಾಸ್ ಪುರು, ನಿಂಗಪ್ಪ ತೋಳದ್, ಹುಚ್ಚಪ್ಪ ವಡವಟ್ಟಿ, ಚಂದಪ್ಪ ಹೆಸರೂರು, ಯಾಕೋಬ ಕಡತಲ್, ಮೌನೇಶ ಕೊಡ್ಲಿ, ಫಕಿರಪ್ಪ, ರಮೇಶ ಇರಬಗೇರ, ಬಸವರಾಜ ಕೆಲಗೇರ, ದೇವರಾಜ ಮ್ಯಾಗಳಮನಿ, ಶುಭಾಶ ಕೆಳಗೇರ, ರಸೂಲ ದಿದ್ದಗಿ, ಹನುಮಂತ ಬುಳ್ಳಾಪುರು , ಸಂತೋಷ ಕಲಶೆಟ್ಟಿ, ಹನುಮೇಶ ಭೋವಿ, ಮೈಬೂ ಅರಕೆರಿ, ಮೌನೇಶ ಚಲುವಾದಿ, ರಫಿ ಒಂಟಿಬಂಡಿ, ಹನುಮಂತ ಬುಳ್ಳಾಪುರು, ಸೇರಿದಂತೆ ಪೋಲಿಸ್ ಇಲಾಖೆ ಬಂದೋಬಸ್ ಒದಗಿಸಿತ್ತು.

# ಗುತ್ತಿಗೆದಾರರಿಂದ ನಗದು ಹಣ ಪಡೆಯದೇ ಆಹಾರ ಪದಾರ್ಥಗಳನ್ನು ಪೂರೈಸುವಂತೆ ಅಗತ್ಯ ಕ್ರಮ ಕೈಗೊಳ್ಳಿ -ಶಾಸಕ ಆರ್.ಬಸನಗೌಡ ತುರ್ವಿಹಾಳ

ವಾರ್ಡನ್‌ಗಳು ನಗದು ಹಣವನ್ನು ಪಡಿಯದೇ ಸಾಮಾಗ್ರಿಗಳ ಪಡೆಯಬೇಕೆಂದರು. ವಾರಕೊಮ್ಮೆ ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಮಾಡಿಸಬೇಕು, ಪ್ರತಿಯೊಂದು ನಿಲಯಗಳಿಗೆ ತಾಲೂಕು ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಬೇಕು. ನೋಡಲ್ ಅಧಿಕಾರಿಗಳು ವಸತಿ ನಿಲಯಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಆಲಿಸಬೇಕು. ಅನುಮತಿ ಇಲ್ಲದೇ ವಿದ್ಯಾರ್ಥಿಗಳನ್ನು ಹೊರಗಡೆ ಕಳುಹಿಸುವಂತಿಲ್ಲ. ವಸತಿ ನಿಲಯಗಳಲ್ಲಿ ದಿನಪತ್ರಿಕೆಗಳು ಹಾಗೂ ಸ್ಪರ್ದಾತ್ಮಕ ಪುಸ್ತಕಗಳ ಒಳಗೊಂಡು ಸುಸಜ್ಜಿತವಾದ ಗ್ರಂಥಾಲಯಗಳನ್ನು ನಿರ್ಮಿಸಬೇಕು. ಸಿಬ್ಬಂದಿಯವರು ಸ್ವಚ್ಚತೆಯಿಂದ ಅಡುಗೆ ಮಾಡಬೇಕು ಹಾಗೂ ಅಡುಗೆ ಬಟ್ಟೆ ಧರಿಸಿ ಅಡುಗೆ ಮಾಡಬೇಕು.

ಎಸ್.ಎಸ್.ಎಲ್.ಸಿ ಪಲಿತಾಂಶ ಸುದಾರಿಸಲು ಬಿ.ಇಡಿ ಪಧವಿ ಪಡೆದಿರುವ ವಾರ್ಡನಗಳು ವಸತಿ ನಿಲಯದಲ್ಲಿ ತರಗತಿಗಳು ನಡೆಸಬೇಕೆಂದರು.ಈ ಸಂದರ್ಭದಲ್ಲಿ ತಾ.ಪಂ ಇಒ ಅಮರೇಶ ಯಾದನ, ಸಹಾಯಕ ನಿರ್ದೇಶಕ ಸೊಮನಗೌಡ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ. ಅಲ್ಪಸಂಖ್ಯಾತರ ಇಲಾಖೆ. ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆಯ ತಾಲೂಕಾಧಿಕಾರಿಗಳು ಮತ್ತು ವಸತಿ ನಿಲಯಗಳ ವಾರ್ಡನ್‌ಗಳಿದ್ದರು.ಮಸ್ಕಿಯ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಶಾಸಕರ ನೇತೃತ್ವದಲ್ಲಿ ವಿವಿಧ ಇಲಾಖೆ ಅಧಿಕಾರಿಗಳ ಸಭೆ ನಡೆಯಿತು.

# ಮಾನ್ಯ ಕೊಲೆ : ತಪ್ಪಿತಸ್ತರಿಗೆ ಕಠಿಣ ಶಿಕ್ಷೆ ವಿಧಿಸಲು ದಮನಿತ ಸೇನಾ ಸಮಿತಿ ಆಗ್ರಹ



**ವಿಜಯಪುರ, ಡಿ. 30:** ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿನ ಇನಾಮ ವೀರಾಪುರ ಗ್ರಾಮದಲ್ಲಿ ಅಂತರ್ಜಾತಿ ವಿವಾಹ ಆಗಿದ್ದಕ್ಕೆ ಮಾನ್ಯ ಪಾಟೀಲ ಅವರನ್ನು ಭೀಕರವಾಗಿ ಕೊಲೆ ಮಾಡಿದ ಅವರ ತಂದೆ ಮತ್ತು ಈ ಕೃತ್ಯದಲ್ಲಿ ಸಹಭಾಗಿಯಾದವರಿಗೆ ಕೂಡಲೇ ಗಲ್ಲು ಶಿಕ್ಷೆ ನೀಡುವಂತೆ ದಮನಿತ ಸೇನಾ ಸಮಿತಿ ಪದಾಧಿಕಾರಿಗಳು ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮವಾರ ಮನವಿ ಸಲ್ಲಿಸಿದರು.

ದಮನಿತ ಸೇನಾ ಸಮಿತಿ ಜಿಲ್ಲಾಧ್ಯಕ್ಷ ಲಕ್ಷ್ಮಣ ಭೀಮಪ್ಪ ಚಲವಾದಿ ಮಾತನಾಡಿ, ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿನ ಇನಾಮ ವೀರಾಪುರ ಗ್ರಾಮದಲ್ಲಿ ಕಳೆದ ಏಳು ತಿಂಗಳುಗಳ ಹಿಂದೆ ಕು. ಮಾನ್ಯ ಪಾಟೀಲ ಮತ್ತು ಅದೇ ಗ್ರಾಮದ ದಲಿತ ಯುವಕ ವಿವೇಕಾನಂದ ಇವರಿಬ್ಬರೂ ಅಂತರ್ಜಾತಿ ವಿವಾಹ ಆಗಿದ್ದಕ್ಕೆ ಮಾನ್ಯಳ ಹೆತ್ತ ತಂದೆ ಪ್ರಕಾಶಗೌಡ ಪಾಟೀಲ ಮತ್ತು ಅವನೊಂದಿಗೆ ಅವರ ಕುಟುಂಬಸ್ಥರಾದ ಗುರುಸಿದ್ದಗೌಡ ಪಾಟೀಲ, ಬಸನಗೌಡ ಪಾಟೀಲ, ಫಕೀರಗೌಡ ಪಾಟೀಲ ಇತರೆ 9 ಜನ ಸೇರಿ ಏಳು ತಿಂಗಳ ಗರ್ಭಿಣಿಯಾದ ಮಾನ್ಯಳನ್ನು ಭೀಕರವಾಗಿ ಕೊಲೆ ಮಾಡಿರುವ ಘಟನೆಯು ಅತ್ಯಂತ ಖಂಡನೀಯವಾಗಿದೆ. ಅದೇ ಸಂದರ್ಭದಲ್ಲಿ ವಿವೇಕಾನಂದನ ತಂದೆ, ತಾಯಿ, ಸಹೋದರಿಯರ ಮೇಲೆಯೂ ಸಹ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ.ಈ ಘಟನೆಯನ್ನು ದಮನಿತ ಸೇನಾ ಸಮಿತಿ (ರಿ), (ಸಾಮಾಜಿಕ ಸಮಾನತೆಗಾಗಿ) ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸುತ್ತದೆ.ಜಾತಿ ಜಾತಿಗಳ ನಡುವೆ ಸಾಮರಸ್ಯ ತರಬೇಕು, ಸಮಾಜದಲ್ಲಿ ಸಮಾನತೆ ಮೂಡಬೇಕು ಎಂಬ ಉದ್ದೇಶದಿಂದ ಈ ನಾಡಿನಲ್ಲಿ ಎಷ್ಟೋ ಮಹನೀಯರು ಶ್ರಮಿಸಿದ್ದಾರೆ. ಸರ್ಕಾರಗಳೂ ಕೂಡಾ ಕಾಯ್ದೆ ಕಾನೂನುಗಳ ಜಾರಿಯ ಮೂಲಕ ಇಂತಹ ವಾತಾವರಣವನ್ನು ಸರಿಪಡಿಸಲು ಶ್ರಮಿಸಿವೆ. ಹೀಗಿದ್ದರೂ ಸಹ ಜಾತಿ ಕಾರಣಕ್ಕಾಗಿ ನಿರ್ಮಾಣವಾಗಿರುವ ಶ್ರೇಷ್ಠತೆಯ ಮನಸ್ಥಿತಿಯನ್ನು ಹೋಗಲಾಡಿಸಲು ಸಾಧ್ಯವಾಗದೇ ಇರುವುದು ಅತ್ಯಂತ ಬೇಸರದ ಸಂಗತಿಯಾಗಿದೆ. ಹಾಗಾಗಿ ಇಂತಹ ಅಮಾನವೀಯ ಕೃತ್ಯವೆಸಗಿದ ಮಾನ್ಯಳ ತಂದೆ ಮತ್ತು ಅವರ ಸಹಚರರಿಗೆ ಕೂಡಲೇ ಗಲ್ಲು ಶಿಕ್ಷೆ ನೀಡಬೇಕು ಎಂದರುಈ ಸಂದರ್ಭದಲ್ಲಿ ದಮನಿತ ಸೇನಾ ಮಹಿಳಾ ಜಿಲ್ಲಾಧ್ಯಕ್ಷೆ ಹೊಸಮನಿ, ಶಿಲ್ಪಾ ಈರಪ್ಪ ಚಲವಾದಿ ಈರಪ್ಪ ಚಲವಾದಿ ಹನುಮಂತ ಹೊಸಮನಿ, ಗೌರೀಶ ಚಲವಾದಿ, ಯಮನಪ್ಪ ಚಲವಾದಿ, ಭೀಮಪ್ಪ ಚಲವಾದಿ, ಯಲಗೂರಪ್ಪ ಚಲವಾದಿ ಮತ್ತಿತರರು ಉಪಸ್ಥಿತರಿದ್ದರು.

## ಕ್ರೀಡೆಗಳಿಂದ ಉತ್ತಮ ಆರೋಗ್ಯ ಕಂಡುಕೊಳ್ಳಬಹುದು



**ಸೈದಾಪುರ:ಡಿ.30:**ಕ್ರೀಡೆಗಳಿಂದ ಶಿಸ್ತು ಸೇರಿದಂತೆ ಉತ್ತಮ ಆರೋಗ್ಯವನ್ನು ಕಂಡುಕೊಳ್ಳಬಹುದು ಇದು ಎಲ್ಲರಲ್ಲಿ ತಂಡಭಾವನೆಯಂತ ಗುಣಗಳನ್ನು ಬೆಳಸುತ್ತದೆ ಎಂದು ಪಿಎಸ್ಐ ಭೀಮರಾಯ ನಾಯಕ ಅಭಿಪ್ರಾಯಪಟ್ಟರು.

ಪಟ್ಟಣದ ಎಸ್.ಜಿ.ಎಸ್. ಶಾಲೆಯಲ್ಲಿ ಹಮ್ಮಿಕೊಂಡ ವಾರ್ಷಿಕ ಕ್ರೀಡಾ ಕೂಟಕ್ಕೆ ಚಾಲನೆ ನೀಡಿ ಮಾತನಾಡಿದರು. ಪ್ರಾಥಮಿಕ ಶಾಲಾ ಹಂತದಲ್ಲಿ ಮಕ್ಕಳಿಗೆ ಓದುವಿನ ಜೊತೆಗೆ ಕ್ರೀಡೆಗಳು ಅತಿ ಮುಖ್ಯವಾಗಿದೆ. ವಿವಿಧ ಗುಣಗಳನ್ನು ಬೆಳಸುವುದುರ ಮೂಲಕ ಉತ್ತಮ ನಾಗರಿಕರನ್ನಾಗಿ ಕಂಡು ಕೊಳ್ಳುವಲ್ಲಿ ನೆರವು ನೀಡುತ್ತದೆ ಎಂದು ಹೇಳಿದರು.

ಶಾಲಾ ಆಡಳಿತ ಮಂಡಳಿಯ ಪ್ರಭುಲಿಂಗ ವಾರದ, ಪಾಲರಕಾದ ಬಸವರಾಜ ಪಾಟೀಲ, ಆಡಳಿತಧಿಕಾರಿ ಪಂಡಿತರಾವ್, ಮುಖ್ಯಗುರು ಅಜಮಲ್.ಜೆ, ದೈಹಿಕ ಶಿಕ್ಷಕ ಪ್ರಕಾಶ ಕಡೇಚೂರು, ಶಿಕ್ಷಕರಾದ ಕೆ.ಪ್ರವಲ್ಲಿಕ, ಮೇಘ ಹೂಗಾರ, ಭೀಮಯ್ಯ, ಆಶಾ, ಮಾಲಾಶ್ರೀ, ದೀಪಾ, ರಾಜೇಶ್ವರಿ, ದೇವಮ್ಮ, ಲೀಜ್ ಪ್ರದೀಪ ಸೇರಿದಂತೆ ಇತರರಿದ್ದರು.

# ಅರಿವಿನ ಮೂಲಕ ದೇವದಾಸಿ ಪದ್ಧತಿ ನಿರ್ಮೂಲನೆ ಸಾಧ್ಯ:ಪ್ರೊ. ಸುನಂದಮ್ಮ



**ವಿಜಯಪುರ, ಡಿ. 30:** ದೇವದಾಸಿ ಪದ್ಧತಿ ಸಮಾಜದ ಗಂಭೀರ ಪಿಡುಗಾಗಿ ಅನೇಕ ಮಕ್ಕಳ ಬದುಕನ್ನು ಶೋಷಣೆ ಮತ್ತು ದೌರ್ಜನ್ಯಕ್ಕೆ ತಳ್ಳುತ್ತಿದೆ. ಶಿಕ್ಷಣ ಮತ್ತು ಹಕ್ಕುಗಳ ಅರಿವಿನ ಮೂಲಕ ಮಾತ್ರ ಈ ಮಕ್ಕಳನ್ನು ಸಬಲಗೊಳಿಸಿ ಸಮಾಜದಲ್ಲಿ ನಿಜವಾದ ಬದಲಾವಣೆ ತರಲು ಸಾಧ್ಯ ಎಂದು ಬೆಂಗಳೂರಿನ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಪ್ರೊ.ಆರ್.ಸುನಂದಮ್ಮ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ ಹಾಗೂ ಚಿಲ್ಡ್ರನ್ ಆಫ್ ಇಂಡಿಯಾ ಫೌಂಡೇಶನ್ ಇವರ ಸಹಯೋಗದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಕಿಶೋರಿ ನಾಯಕಿಯರ ಒಕ್ಕೂಟ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಂತ ದುಡಿಮೆ ಹಾಗೂ ಶಿಕ್ಷಣದಿಂದಲೇ ಸಮಾಜದ ಬದಲಾವಣೆ ಸಾಧ್ಯ. ಸಮಾಜದಲ್ಲಿರುವ ಎಲ್ಲಾ ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕಿ ಸ್ವತಂತ್ರವಾಗಿ ಜೀವನ ನಡೆಸುವ ಅವಕಾಶ ಎಲ್ಲರಿಗೂ ಇದೆ. ಕುಟುಂಬ ವ್ಯವಸ್ಥೆ ಹೆಣ್ಣುಮಕ್ಕಳಿಗೆ ಆಧಾರವಾಗ ಬೇಕಾದರೂ, ಅನೇಕರು ದೌರ್ಜನ್ಯ ಮತ್ತು ಶೋಷಣೆಯನ್ನು ಅನುಭವಿಸುತ್ತಿದ್ದಾರೆ. ಮಕ್ಕಳಿಗೆ ಆತ್ಮವಿಶ್ವಾಸ ಬೆಳೆಸಿ, ತಮ್ಮ ಹಕ್ಕುಗಳು ಹಾಗೂ ಕಾಯ್ದೆ–ಕಾನೂನುಗಳ ಬಗ್ಗೆ ಅರಿವು ಮೂಡಿಸುವುದು ಅಗತ್ಯ.

ಇದೇ ಸಂದರ್ಭದಲ್ಲಿ ವಿಜಯಪುರ ಜಿಲ್ಲಾ ಕಾನೂನು ಸೇವಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಅರವಿಂದ ಎಸ್ ಹಾಗರಗಿ ಮಾತನಾಡಿ, ಸಮಾಜದ ಶೋಷಿತ ವರ್ಗವನ್ನು ಮೇಲೆತ್ತಲು ಗುಡ್ ಸಂಸ್ಥೆ ಸಾಕಷ್ಟು ಶ್ರಮವಹಿಸುತ್ತಿದೆ. ದೇವದಾಸಿ ನಿರ್ಮೂಲನೆಗಾಗಿ ಜಾರಿಯಾದ ಸಮರ್ಪಣಾ ಕಾಯ್ದೆಯ ಮೂಲಕ ಈ ಪದ್ಧತಿಗೆ ಒಳಪಟ್ಟ ಅನೇಕ ಮಕ್ಕಳನ್ನು ಮೇಲೆತ್ತುವ ಉದ್ದೇಶದಿಂದ ವಿವಿಧ ಯೋಜನೆಗಳನ್ನು ರೂಪಿಸಲಾಗುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ಬೆಂಗಳೂರಿನ ಮಕ್ಕಳ ತಜ್ಞ, ಮಕ್ಕಳ ಹಕ್ಕುಗಳ ಹೋರಾಟಗಾರ ವಾಸುದೇವ ಶರ್ಮಾ ಗುಡ್ ಯೋಜನೆಯ ಪ್ರಯಾಣ ಮತ್ತು ಒಕಾಲತ್ತು ಸೂಚಿ ಹಂಚಿಕೊಂಡರು.

ಇದೇ ಸಂದರ್ಭದಲ್ಲಿ ಕ್ರೀಡೆಯಲ್ಲಿ ಭಾಗವಹಿಸಿದ ಕಿಶೋರಿ ಮತ್ತು ಕಿಶೋರ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಹಾಗೂ ಎಲ್ಲ ಸಂಘಟಕರಿಗೆ ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಿಳಾ ವಿವಿಯ ಕುಲಪತಿ ಪ್ರೊ. ವಿಜಯಾ ಕೋರಿಶೆಟ್ಟಿ ಮಾತನಾಡಿ, ಮಕ್ಕಳ ಮೇಲೆ ನಡೆಯುವ ಶೋಷಣೆ ಮತ್ತು ದೌರ್ಜನ್ಯಗಳನ್ನು ತೊಡೆದು ಹಾಕಲು ಜಾಗತಿಕದಿಂದ ಸ್ಥಳೀಯ ಮಟ್ಟದವರೆಗೆ ಅನೇಕ ಸಂಸ್ಥೆಗಳು ಶ್ರಮಿಸುತ್ತಿವೆ. ರಾಜ್ಯಮಟ್ಟದ ಕಿಶೋರಿ–ಕಿಶೋರರ ಒಕ್ಕೂಟವು ಶೋಷಿತ ಮಕ್ಕಳನ್ನು ಮೇಲೆತ್ತುವ ಮಹತ್ವದ ಪಾತ್ರ ವಹಿಸುತ್ತಿದೆ. ಡಿಜಿಟಲ್ ಕ್ರಾಂತಿಯೊಂದಿಗೆ ಸಾಮಾಜಿಕ ಮಾಧ್ಯಮಗಳ ದುರ್ಬಳಕೆ ಮಕ್ಕಳ ಕಲಿಕೆ ಮತ್ತು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವುದರಿಂದ, ಅದರ ಬಳಕೆ ಸರಿಯಾದ ಮಾರ್ಗದಲ್ಲಿ ಆಗಬೇಕು ಎಂದರು.

ಕಾರ್ಯಕ್ರಮದಲ್ಲಿ ಮಹಿಳಾ ವಿವಿಯ ಮೌಲ್ಯಮಾಪನ ಕುಲಸಚಿವ ಪ್ರೊ.ಬಸವರಾಜ ಲಕ್ಕಣ್ಣವರ, ವಿವಿಯ ಶಿಕ್ಷಣ ನಿಕಾಯದ ಡೀನ ಪ್ರೊ.ಸಕ್ಪಾಲ್ ಹೂವಣ್ಣ, ಶಿಕ್ಷಣ ಇಲಾಖೆಯ ಉಪನಿರ್ದೇಶಕ ವಿ.ವಿ.ಸಾಲಿಮಠ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ದೀಪಾಕ್ಷಿ ಜಾನಕಿ, ಮುಖ್ಯಸ್ಥರು, ವಿದ್ಯಾರ್ಥಿನಿಯರು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ, ವಿವಿಧ ಜಿಲ್ಲೆಗಳಿಂದ ಆಗಮಿಸಿರುವ 500ಕ್ಕೂ ಹೆಚ್ಚು ಕಿಶೋರಿ ನಾಯಕಿ ಹಾಗೂ ಕಿಶೋರ ನಾಯಕರು ಉಪಸ್ಥಿತರಿದ್ದರು.

ಕಾರ್ಯುಕ್ರಮದಲ್ಲಿ ಪ್ರದರ್ಶನ ಕಲೆಗಳ ವಿಭಾಗದ ವಿದ್ಯಾರ್ಥಿನಿಯರು ಮಹಿಳಾ ಗೀತೆ ಹಾಡಿದರು. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಪ್ರೊ.ಓಂಕಾರ ಕಾಕಡೆ ಸ್ವಾಗತಿಸಿದರು. ನೆದರ್‌ಲ್ಯಾಂಡ್ಸ್ ಇಂಡಿಯಾ ಮತ್ತು ನೇಪಾಳ,ಬಿ.ಡಿ.ಹೆಚ್ ರಾಷ್ಟ್ರೀಯ ನಿರ್ದೇಶಕ ಪಿ.ತಂಗಪೆರುಮಾಳ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಡಾ. ಭಾಗ್ಯಶ್ರೀ ದೊಡ್ಡಮನಿ ಹಾಗೂ ಡಾ.ಸುರೇಖಾ ರಾಠೋಡ ಅತಿಥಿಯರನ್ನು ಪರಿಚಯಿಸಿದರು. ಅತಿಥಿ ಉಪನ್ಯಾಸಕಿ ಸುಷ್ಮಾ ಪವಾರ ನಿರೂಪಿಸಿದರು. ಕಾರ್ಯಕ್ರಮದ ಸಂಯೋಜಕಿ ಜನೀಫ್‌ರ ವೈ ವಂದಿಸಿದರು.

# ನಿಸ್ವಾರ್ಥದಿಂದ ಸಮಾಜ ಕಟ್ಟುವ ಕಾರ್ಯ ಮಾಡಿ:ಪೂಜಾರಿ



**ವಿಜಯಪುರ, ಡಿ.30:** ಸಮಾಜ ಸಂಘಟನೆಯಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಶ್ರದ್ಧೆಯಿಂದ ಕಾರ್ಯ ನಿರ್ವಹಿಸಿ ನಿಸ್ವಾಥದಿಂದ ಸಮಾಜ ಕಟ್ಟುವ ಕಾಯಕ ಮಾಡಬೇಕೆಂದು ಮಕ್ಕಳ ಸಾಹಿತಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹ.ಮ. ಪೂಜಾರಿ ಹೇಳಿದರು.

ನಗರದಲ್ಲಿ ಹಮ್ಮಿಕೊಂಡ ವಿಜಯಪುರ ಜಿಲ್ಲಾ ಹೂಗಾರ, ಪೂಜಾರಿ, ಜೀರ ಹಾಗೂ ಗುರವ ಸಮಾಜ ಸೇವಾ ಸಂಘಕ್ಕೆ ನೂತನ ಪದಾಧಿಕಾರಿಗಳ ಸದಸ್ಯರಿಗೆ ಪದಗ್ರಹಣ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಮಾಜದಲ್ಲಿ ನಮ್ಮ ಮಕ್ಕಳ ಶಿಕ್ಷಣ ಪ್ರಗತಿ ಕುರಿತು ಚಿಂತನೆ ಇರಬೇಕು. ನಮ್ಮ ಸಮುದಾಯ ಬೆಳೆಸಬೇಕು ಇತರೆ ಸಮಾಜವನ್ನು ಗೌರವಿಸಬೇಕು. ನೂತನ ಪದಾಧಿಕಾರಿಗಲು ಕ್ರೀಯಾಶೀಲತೆಯಿಂದ ಕಾರ್ಯ ನಿರ್ವಹಿಸಬೇಕೆಂದು ಕೋರಿದರು.

ಸಮಾರಂಭದಲ್ಲಿ ಪಾಲ್ಗೊಂಡಿದ್ದ ರಾಜ್ಯ ಪದಾಧಿಕಾರಿಗಳಾದ ಅರವಿಂದ ಹೂಗಾರ, ನಮ್ಮ ಸಮಾಜದ ಶ್ರೇಯೋಭಿವೃದ್ಧಿಗೆ ನೂತನ ಸಮಿತಿ ಶ್ರಮವಹಿಸಲಿ. ಪ್ರತಿಯೊಂದು ಚಟುವಟಿಕೆಗಳಲ್ಲಿ ಮುಂದೆ ಬರಬೇಕೆಂದು ಶುಭ ಹರಿಸಿದರು.

ಇದೇ ಸಂದರ್ಭದಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ನೂತನವಾಗಿ ಹೂಗಾರ ಸಮಾಜದ ಅಧ್ಯಕ್ಷರಾಗಿ ಎಮ್ ಆರ್ ಪೂಜಾರಿ ಹಾಗೂ ಉಪಾಧ್ಯಕ್ಷರಾಗಿ ಗಿರಿಮಲ್ಲಪ್ಪ ಎಸ್ ಪೂಜಾರಿ, ಸಂಗಪ್ಪ ರಾಯಪ್ಪ ಹೂಗಾರ ಮತ್ತು ಕಾರ್ಯದರ್ಶಿಯಾಗಿ ಅಶೋಕ ಹೂಗಾರ ಮತ್ತು ದತ್ತಾತ್ರಾಯ ಪೂಜಾರಿ ಕೋಶ್ಯಾಧ್ಯಕ್ಷರಾಗಿ ಅಶೋಕ ಈರಪ್ಪಾ ಹೂಗಾರ ಸಂಘಟನಾ ಕಾರ್ಯದರ್ಶಿಯಾಗಿ ಸಿದ್ದರಾಮ ಎಚ್.ಹೂಗಾರ, ಚಿದಾನಂದ ಹೂಗಾರ, ಮಹೇಶ ಗುರವ, ಕಿರಣಕುಮಾರ ಹೂಗಾರ, ಪುಂಡಲೀಕ ಹೂಗಾರ ಮತ್ತು ಸದಸ್ಯರಾಗಿ ಬೀಮಪ್ಪಾ ಶಿ. ಹೂಗಾರ, ಅರವಿಂದ ಭೋ ಹೂಗಾರ, ಬಸವರಾಜ ಎಲ್ ಹೂಗಾರ, ರಾಜಶೇಖರ ಹ ಹೂಗಾರ, ಶಿವಪುತ್ರ ಜೀರ, ಕಾಂತು ಹೂಗಾರ ಆಯ್ಕೆಯಾಗಿದ್ದಾರೆ. ಸಮಾರಂಭದಲ್ಲಿ ಶಂಕರ ಹೂಗಾರ, ಹಣಮಂತ್ರಾಯ ಹೂಗಾರ ಹರವಾಳ, ಡಾ. ಗುರುನಾಥ ಹೂಗಾರ ನಿವೃತ್ತ ಡಿ ಡಿ ಪಿ ಆಯ್ ಅವರು ಭಾಗವಹಿಸಿದ್ದರು. ಸಾಧಕರಿಗೆ ಸುಜಾತಾ ಪೂಜಾರಿ, ಕುಮಾರಿ ಸೌಮ್ಯಾ ಅಂಬಣ್ಣ ಪೂಜಾರಿ ಮತ್ತು ಡಾ. ವಿನಯ ಹೂಗಾರ ತಹಶೀಲ್ದಾರರು ತಾಳಿಕೋಟಿ ಇವರಿಗೆ ಸನ್ಮಾನಿಸಲಾಯಿತು. ಹೂಗಾರ ಸಮಾಜದ ಎಲ್ಲ ಸದಸ್ಯರು ಪದಾಧಿಕಾರಿಗಳೂ ಭಾಗವಹಿಸಿದ್ದರು.

## ಸೃಷ್ಠಿಗೆ ಕರುನಾಡ ನಾಟ್ಯ ಕಲಾಮಣಿ ರಾಷ್ಟ್ರೀಯ ಪ್ರಶಸ್ತಿ ಪ್ರಧಾನ



**ತಾಳಿಕೋಟೆ:ಡಿ.30:** ಪಟ್ಟಣದ ನಿವಾಸಿ ಆಗಿರುವ ಭರತನಾಟ್ಯ ಹಾಗೂ ಜಾನಪದ ನೃತ್ಯ ಕಲಾವಿದೆ ಕುಮಾರಿ. ಸೃಷ್ಠಿ ಹಿರೇಮಠ ಇವಳಿಗೆ 2025–2026 ನೇ ಸಾಲಿನ "ಕರುನಾಡ ನಾಟ್ಯ ಕಲಾಮಣಿ ರಾಷ್ಟ್ರೀಯ ಪ್ರಶಸ್ತಿ ಪ್ರಧಾನ ಮಾಡಲಾಗಿದೆ.

ಹುಬ್ಬಳ್ಳಿಯ ವಿಶ್ವದರ್ಶನ ದಿನಪತ್ರಿಕೆ ವತಿಯಿಂದ ದಾವಣಗೇರಿಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕುವೇಂಪು ಕನ್ನಡ ಭವನದಲ್ಲಿ ಜರುಗಿದ 6ನೇ ರಾಜ್ಯ ಭಾವೈಕ್ಯತೆಯ ಸಮ್ಮೇಳನದಲ್ಲಿ ತಾಳಿಕೋಟೆಯ ವಿರಕ್ತೇಶ್ವರ ಭರತ ನಾಟ್ಯ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿನಿ ಕುಮಾರಿ ಸೃಷ್ಠಿ ಹಿರೇಮಠಗೆ ವಿಶ್ವ ದರ್ಶನ ಕನ್ನಡ ದಿನಪತ್ರಿಕೆ ಹಾಗೂ ಕರ್ನಾಟಕ ಪ್ರಜಾ ದರ್ಶನ ಪತ್ರಿಕೆಯ ಸಂಪಾದಕ ಡಾ.ಎಸ್.ಎಸ್. ಪಾಟಿಲ ಅವರು "ಕರುನಾಡ ನಾಟ್ಯ ಕಲಾಮಣಿ ರಾಷ್ಟ್ರೀಯ ಪ್ರಶಸ್ತಿ" ನೀಡಿ ಗೌರವಿಸಿದರು.

ಸೃಷ್ಟಿ ಹಿರೆಮಠ ಕಳೆದ 4 ವರ್ಷದಿಂದ ತಾಳಿಕೋಟೆಯ ಶ್ರೀ ವಿರಕ್ತೇಶ್ವರ ಭರತನಾಟ್ಯ ತರಬೇತಿ ಸಂಸ್ಥೆಯಲ್ಲಿ ಭರತನಾಟ್ಯ ಶಿಕ್ಷಣ ಪಡೆಯುತ್ತಿದ್ದು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಭರತನಾಟ್ಯ ಹಾಗೂ ಜಾನಪದ ನೃತ್ಯ ಪ್ರದರ್ಶನ ನೀಡಿದ್ದಾಳೆ ಈಗಾಗಲೇ ಸೃಷ್ಠಿ ಹಿರೇಮಠಗೆ ರಾಜ್ಯ, ಜಿಲ್ಲಾ ಪ್ರಶಸ್ತಿಗಳು ಲಭಿಸಿವೆ.

ವಿದ್ಯಾರ್ಥಿನಿ ಕು.ಸೃಷ್ಠಿ ಹಿರೇಮಠಗೆ "ಕರುನಾಡ ನಾಟ್ಯ ಕಲಾಮಣಿ ರಾಷ್ಟ್ರೀಯ ಪ್ರಶಸ್ತಿ ಲಭಿಸಿದಕ್ಕೆ ಶ್ರೀ ವಿರಕ್ತೇಶ್ವರ ಭರತನಾಟ್ಯ ತರಬೇತಿ ಸಂಸ್ಥೆಯ ಅಧ್ಯಕ್ಷರಾದ ವಿನೋದಕುಮಾರ ಚಿಕ್ಕಮಠ ಹಾಗೂ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

## ಮರ್ಯಾದೆಗೇಡಿ ಹತ್ಯೆ: ದಲಿತ ಸ್ವರಾಜ್ಯ ಸೇನೆ ಖಂಡನೆ



**ವಿಜಯಪುರ, ಡಿ. 30:** ಹುಬ್ಬಳ್ಳಿ ತಾಲೂಕಿನ ಇನಾಮ ವೀರಪುರ ಗ್ರಾಮದ ಮಾನ್ಯಾ ಪಾಟೀಲ್ ಸಹೋದರಿಯ ಮರ್ಯಾದೆಗೇಡಿ ಹತ್ಯೆ ಖಂಡಿಸಿ ದಲಿತ ಸ್ವರಾಜ್ಯ ಸೇನೆ ವತಿಯಿಂದ ಜಿಲ್ಲಾಡಳಿತದ ಮೂಲಕ ಸೋಮವಾರ ರಾಷ್ಟ್ರಪತಿಗಳಿಗೆ ಖಂಡನಾ ಪತ್ರ ಸಲ್ಲಿಸಿದರು.

ಈ ಘಟನೆಗೆ ಇಡೀ ಮಾನವ ಸಮಾಜವವೇ ತಲೆತಗ್ಗಿಸುವಂತೆ ಆಗಿದೆ. ಮಗಳ ಬಾಳಿನಲ್ಲಿ ಜನ್ಮದಾತನೇ ರಾಕ್ಷಸನಂತಾಗಿದ್ದಾನೆ ಎಂದು ಡಿಎಸ್ಎಸ್ ಅಧ್ಯಕ್ಷ ಗೌಡಪ್ಪ ಬಡಿಗೇರ ಖಂಡಿಸಿದರು. ಪೂರ್ಣ ವಯಸ್ಕರು ಒಪ್ಪಿ ಮದುವೆಯಾಗುವುದು ತಪ್ಪೇ. ಸಮಾಜದಲ್ಲಿ ಶೋಷಣೆಗೊಳಗಾದ ಎಲ್ಲ ಸಮುದಾಯಗಳಲ್ಲಿ, ಮಹಿಳಾ ಸಮುದಾಯ ಮೊದಲಾಗಿದೆ.

ಬಸಮ್ಮ, ಸೌಜನ್ಯ, ಬಿಲ್ಕಿಸ್ ಬಾನು, ನಿರ್ಭಯ, ದಾನಮ್ಮ, ರೇಣುಕಾ, ಈಗ ಮಾನ್ಯ ಪಾಟೀಲ್ ಹೀಗೆ ಭವಿಷ್ಯದಲ್ಲಿ ಇನ್ನಷ್ಟು ಅಮಾಯಕ ಸಹೋದರಿಯರ ಸಾವು ನೋವುಗಳಾಗಬಹುದು. ಇಂತಹ ಅಮಾಯಕರ ಸಾವುಗಳಿಗೆ ಕೊನೆಯೇ ಇಲ್ಲವೇ ಎನ್ನುವಂತಾಗಿದೆ. ಇನ್ನೂ ಇತಿಹಾಸ ಮರೆತೆ ಹೋಗಿರುವ ಅದೆಷ್ಟೋ ಪ್ರಕರಣಗಳು, ಭವಿಷ್ಯತ್ತಿನಲ್ಲಿ ಇಂತಹ ಪ್ರಕರಣಗಳು ಮರುಕಳಿಸದಂತೆ ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

ಕನ್ನಡ ಪರ ಮುಖಂಡ ಫಯಾಜ್ ಕಲಾದಗಿ ಮಾತನಾಡಿ, ಪುರುಷ ಪ್ರಧಾನ ಸಮಾಜ ಮತ್ತು ವರ್ಗ ಬೇಧ ವ್ಯವಸ್ಥೆ ಭಾರತವನ್ನು ನಲುಗಿಸಿದೆ. ಇದು ಅಖಂಡ ದೇಶಕ್ಕೆ ಅಪಾಯಕರ ಸೂಚನೆ. ಇಂತಹ ಅಮಾನವೀಯ ಪ್ರಕರಣಗಳು ಮೂರೇ ವರ್ಷಗಳಲ್ಲಿ 13,154 ಕೇಸ್‌ಗಳು ದಾಖಲಾಗಿವೆ. 2023–24ರಲ್ಲಿ 3740, 2024–25ರಲ್ಲಿ 5507 ಹಾಗೂ 2025–,26ರಲ್ಲಿ 3907 ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. 2024–25ರಲ್ಲಿಯೇ ಹೆಚ್ಚು ಪ್ರಕರಣಗಳು ದಾಖಲಾಗಿರುವುದು ಬೆಳಕಿಗೆ ಬಂದಿದೆ ಎಂದರು.

ಕೋಲಾರ ಜಿಲ್ಲೆಯ ಕಂಬಾಲಪಲ್ಲಿ, ಕೊಪ್ಪಳ ಜಿಲ್ಲೆಯ ಮರಕುಂಬಿ ಪ್ರಕರಣಗಳು ಕಣ್ಣ ಮುಂದೆ ಇದ್ದಾಗಿಯೂ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳ ತಡೆಗೆ ಹಿನ್ನಡೆಯಾಗುತ್ತಿರುವುದು ಏಕೆ ಎಂಬ ಪ್ರಶ್ನೆ ಯಾಗಿದೆ. ಅನ್ಯಾಯ ಎಲ್ಲೆ ನಡೆದರೂ ಖಂಡಿಸುವುದು ಮಾನವ ಸಮಾಜದ ಕರ್ತವ್ಯವಾಗಬೇಕು ಎಂದರು.

ಈ ಸಂದರ್ಭದಲ್ಲಿ ಸಮಿತಿ ಪದಾಧಿಕಾರಿಗಳಾದ ಅಮೃತ್, ಶರಣು, ಸಾಗರ್, ತೌಫಿಕ್, ಕನ್ನಡಪರ, ದಲಿತಪರ, ಬಸವಪರ ಹಾಗೂ ಸೂಫಿ ಪರ ಸಂಘಟನೆಗಳ ಮುಖಂಡರುಗಳಾದ ಜಗದೇವ ಸೂರ್ಯವಂಶಿ, ಡಾ. ರಫೀಕ್ ಗುರಿಕಾರ್, ಗಿರೀಶ್ ಕಲಘಟಗಿ, ನಾಗರಾಜ್, ಮಲ್ಲು ಇನ್ನಿತರ ಪದಾಧಿಕಾರಿ ಸದಸ್ಯರುಗಳು ಉಪಸ್ಥಿತರಿದ್ದರು.

# ಯಾರೂ ಕಸಿದುಕೊಳ್ಳದ ವಿದ್ಯೆ ಶಿಕ್ಷಣವಾಗಿದೆ:ಸಿದ್ದಲಿಂಗಶ್ರೀ

**ತಾಳಿಕೋಟೆ:ಡಿ.30:** ಪ್ರಪಂಚದಲ್ಲಿ ಗುರುವಿಗೆ ಇರುವ ಸ್ಥಾನ ಅತ್ಯಂತ ಅಮೂಲ್ಯವಾದುದ್ದಾಗಿದೆ ತಂದೆ, ತಾಯಿ ನಂತರದ ಸ್ಥಾನ ಇರುವುದೇ ಗುರುವಿಗೆ ಆ ಕಾಯಕವನ್ನು ಪ್ರತಿಯೊಬ್ಬ ಶಿಕ್ಷಕರು ತಮ್ಮದೇ ಆದ ರೀತಿಯಲ್ಲಿ ಯಶಸ್ವಿಯಾಗಿ ನಿರ್ವಹಿಸಿಕೊಂಡು ಬಂದಿದ್ದರ ಫಲವೇ ಗುರುವಂದನಾ ಕಾರ್ಯಕ್ರಮವಾಗಿ ಮಾರ್ಪಟ್ಟಿದೆ ಇಂದು ಹಳೆಯ ವಿದ್ಯಾರ್ಥಿಗಳೆಲ್ಲರೂ ಸೇರಿ ಕಲಿಸಿದ ಗುರುಗಳಿಗೆ ಗೌರವಿಸುತ್ತಿರುವದು ಶ್ಲಾಘನೀಯವಾಗಿದೆ ಎಂದು ಶ್ರೀ ಖಾಸ್ಗತೇಶ್ವರ ಮಠದ ಬಾಲಶಿವಯೋಗಿ ಶ್ರೀ ಸಿದ್ದಲಿಂಗ ದೇವರು ನುಡಿದರು.

ರವಿವಾರರಂದು ತಾಲೂಕಿನ ಕೊಣ್ಣೂರ ಗ್ರಾಮದ ಶ್ರೀ ಬಲವಂತ್ರಾಯ ಹಡಲಗೇರಿ ಪ್ರೌಢಶಾಲೆಯ ಆವರಣದಲ್ಲಿ ಕೊಣ್ಣೂರ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯ 1996ನೇ ಸಾಲಿನ 7ನೇ ವರ್ಗದ ಹಾಗೂ ಶ್ರೀ ಬಲವಂತ್ರಾಯ ಹಡಲಗೇರಿ ಪ್ರೌಢಶಾಲೆಂಯು 1999ನೇ ಸಾಲಿನ ಎಸ್.ಎಸ್.ಎಲ್.ಸಿ. ಬ್ಯಾಚ್ ವಿಧ್ಯಾರ್ಥಿಗಳಿಂದ ಏರ್ಪಡಿಸಲಾದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ದಿವ್ಯ ಸಾನಿದ್ಯ ವಹಿಸಿ ಮಾತನಾಡುತ್ತಿದ್ದ ಅವರು ಸಮಾಜದಲ್ಲಿ ಏಳ್ಗೆಯನ್ನು ಸಾಧಿಸಬೇಕು ಎಂದರೇ ವಿದ್ಯೆ ಒಂದೇ ದಾರಿಯಾಗಿ ಆ ವಿದ್ಯೆ ಸಮರ್ಪಕವಾಗಿ ವಿದ್ಯಾರ್ಥಿಗಳಿಗೆ ಮುಟ್ಟಿದ್ದರ ಪರಿಣಾಮ ಇಂದು ಗುರುವಂದನಾ ಕಾರ್ಯಕ್ರಮವಾಗಿ ಮಾರ್ಪಟ್ಟಿದೆ ವಿದ್ಯೆ ಕಲಿತು ತಾವು ಏನಾದರೂ ಸಾಧಿಸಲೇ ಬೇಕು ಎಂಬ ಛಲ ಹೊಂದಿರುವ ವ್ಯಕ್ತಿಗಳಾಗಿರುವ ಕಾರಣದಿಂದಲೇ ಕೊಣ್ಣೂರ ಗ್ರಾಮದ ಶಾಲೆಯಲ್ಲಿ ವ್ಯಾಸಂಗ ಮಾಡಿರುವ ಅನೇಕರು ಇಂದು ದೇಶದ ನಾನಾ ಭಾಗಗಳಲ್ಲಿ ಉನ್ನತ ಸ್ಥಾನಮಾನಗಳನ್ನು ಅಲಂಕರಿಸಿ ಸೇವೆ ಸಲ್ಲಿಸುತ್ತಿದ್ದಾರೆ



ವಿಧ್ಯಾರ್ಥಿದಿಸೆಯಿಂದಲೇ ಮುಂದೆ ಗುರಿ ಇಟ್ಟುಕೊಂಡು ಗುರುವಿನ ಮಾರ್ಗದರ್ಶನದೊಂದಿಗೆ ಸಾಗಿದ ವಿದ್ಯಾರ್ಥಿಗಳಿಗೆ ಉನ್ನತಮಟ್ಟಕ್ಕೆ ಮುಟ್ಟಲು ಸಾದ್ಯವಾಗಿದೆ ಶಿಕ್ಷಣ ಕಲಿಸಿದ ಗುರುವಿಗೆ 25-30 ವರ್ಷ ಘತಿಸಿದರೂ ಮರೆಯದೇ ಗೌರವಿಸುವ ಕಾರ್ಯಕ್ರಮ ಹಮ್ಮಿಕೊಂಡಿರುವದು ಶ್ಲಾಘನೀಯವಾಗಿದೆ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ನಿವೃತ್ತ ಪ್ರಾಂಶುಪಾಲ ಹಿರಿಯ ಸಾಹಿತಿ ಬಿ.ಆರ್.ಪೋಲಿಸಪಾಟೀಲ ಅವರು ಮಾತನಾಡಿ ಗುರುವಿನ ಮಾರ್ಗದರ್ಶನದಲ್ಲಿ ಸಾಗಿದ ಪ್ರತಿಯೊಬ್ಬ ವಿದ್ಯಾರ್ಥಿ ಜೀವನವು ಸಂದರಾಗಿರುತ್ತದೆ ನಾವುಗಳು ಸಾಕಷ್ಟು ಆಸ್ತಿ ಅಂತಸ್ಥಗಳನ್ನು ಗಳಿಸಬಹುದು ಆದರು ಒಂದು ಕ್ಷಣಮಾತ್ರದಲ್ಲಿ ಕಳೆದು ಹೋಗಬಹುದು ಆದರೆ ಕಲಿತ ವಿದ್ಯೆ ಜೀವನಕ್ಕೆ ಸದಾ ಕಾಲ ಆದಾರವಾಗಿರುತ್ತದೆ ಅಂತಹ ವಿದ್ಯೆಗೆ ಆಸಕ್ತಿತೋರಿದ ಪ್ರತಿಯೊಬ್ಬ ಹಳೆಯ ವಿದ್ಯಾರ್ಥಿಯು ಇಂದು ನಮ್ಮಮುಂದೆ ವಿವಿದ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವದರೊಂದಿಗೆ ಸಮಾಜಕ್ಕೆ ಆದಾರವಾಗಿರುವದು ಸಂತಸ ತಂದಿದೆ ಹಳೆಯ ವಿದ್ಯಾರ್ಥಿಗಳ ನಡವಳಿಕೆಗಳಿಕೆಗಳು ಇಂದಿನ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿದೆ ಗುರುವಿನ ಮಾರ್ಗದರ್ಶನದಲ್ಲಿ ಸಾಗಿ ಉನ್ನತ ಮೇಟ್ಟಿಲು ಹತ್ತಿದ ಪ್ರತಿ ವಿದ್ಯಾರ್ಥಿಗಳು ಅಭಿನಂದಾರ್ಹರು ಎಂದರು.

ಮಾಜಿ ಶಾಸಕ ಸೋಮನಗೌಡ ಪಾಟೀಲ(ಸಾಸನೂರ) ಅವರು ಮಾತನಾಡಿ ಒಬ್ಬೊಬ್ಬರು ಒಂದೊಂದು ಕಡೆ ವಿಭಿನ್ನವಾದ ಸಂಸ್ಥೆಗಳು, ವಿಭಿನ್ನ ಶೈಲಿಯ ವ್ಯವಹಾರಗಳು, ವಿಭಿನ್ನ ವೃತ್ತಿಗಳನ್ನು ಆಯ್ಕೆ ಮಾಡಿಕೊಂಡು ಇಂದು ಸಕಾರಾತ್ಮಕ ಜೀವನ ನಡೆಸುತ್ತಿರುವ ಬಗ್ಗೆ ಹೇಳಿಕೊಂಡಿದ್ದಲ್ಲದೇ ತಮ್ಮ ಹಿಂದಿನ ದಿನಗಳ ನೆನಪುಗಳನ್ನು ಮೆಲುಕು ಹಾಕಿಕೊಳ್ಳುವ ಒಂದು ಸನ್ನಿವೇಶಕ್ಕೆ ಸಾಕ್ಷಿಗಳಾಗಿ ಎಲ್ಲರೂ ಒಟ್ಟಿಗೆ ಸೇರಿ ಗುರುವಂದನಾ ಕಾರ್ಯಕ್ರಮ ಆಯೋಜಿಸಿ ಗುರುಗಳಿಗೆ ಸಲ್ಲಿಸಿದ ಗೌರವ ನೋಡಿ ಸಂತಸವಾಗಿದೆ ಎಂದರು.

ವೇ.ಶ್ರೀನಾಥಯ್ಯ ಹಿರೇಮಠ, ಉಪನ್ಯಾಸಕ ಆಯ್.ಬಿ.ಹಿರೇಮಠ ಅವರು ಮಾತನಾಡಿದರು. ಮುತ್ತುರಾಜ ಕೊಲಕಾರ ಪ್ರಾಸ್ಥಾವಿಕ ಮಾತನಾಡಿದರು.

ಕಾರ್ಯಕ್ರಮದಲ್ಲಿ ವಿಶೇಷವಾಗಿ ಗುರುಗಳಿಗೆ ಪುಷ್ಪನಮನ, ಪುಷ್ಪದಿಂದಲೇ ಅವರುಗಳನ್ನು ವೇದಿಕೆಯವರೆಗೆ ಭವ್ಯ ಸ್ವಾಗತ ನೀಡುವುದರ ಮೂಲಕ ವಿದ್ಯೆ ಕಲಿಸಿದ ಗುರುಗಳಿಗೆ ಹಳೇ ವಿದ್ಯಾರ್ಥಿಗಳು ಸನ್ಮಾನಿಸಿ ಗೌರವ ಸಲ್ಲಿಸಿದರು.

ಈ ಸಮಯದಲ್ಲಿ ಶ್ರೀ ಬಲವಂತ್ರಾಯ ಹಡಲಗೇರಿ ಪ್ರೌಢಶಾಲೆಯ ಮುಖ್ಯೋಪಾದ್ಯಾಯ ಡಿ.ಆರ್.ಚವ್ಹಾಣ, ಕೆ.ವಾಯ್.ಚಲವಾದಿ, ಕೆಜಿವ್ಹಿಎ ಸಂಘದ ನಿರ್ದೇಶಕರಾದ ಡಾ.ಬಸವರಾಜ ಅಸ್ಕಿ, ನಿವೃತ್ತ ಶಿಕ್ಷಕರುಗಳಾದ ಬಿ.ಎಸ್.ಐನಾಪೂರ, ಆರ್.ಸಿ.ಬಿರಾದಾರ, ಎಂ.ಜಿ.ಪಾಟೀಲ, ಎಸ್.ಎಸ್.ಸಂಗನಗೌಡರ, ಜಿ.ಕೆ.ಚಟ್ಟರಕಿ, ವ್ಹಿ.ಡಿ.ನಾಗರಾಳ, ಎಸ್.ಜಿ.ಗುಣಕಿ, ಶ್ರೀಮತಿ ಎ.ಎಸ್.ಕುಲಕರ್ಣಿ, ಆರ್.ಟಿ.ಲಮಾಣಿ, ಶ್ರೀಮತಿ ಡಿ.ಕೆ.ರಾಠೋಡ, ಎಂ.ಪಿ.ಶೆಟ್ಟರ, ಎಸ್.ಬಿ.ಪೂಜಾರಿ, ಎಂ.ಎನ್.ಅಸ್ಕಿ, ಶ್ರೀಮತಿ ಎಸ್.ಬಿ.ಬಿರಾದಾರ, ಎಂ.ಎಂ.ಮುರಾಳ, ಎಸ್.ಬಿ.ಬಿರಾದಾರ, ಪಿ.ಸಿ.ಬಿರಾದಾರ, ಎಂ.ಸಿ.ಕೊಣ್ಣೂರ, ಹಾಗೂ ಹಳೆಯ ವಿದ್ಯಾರ್ಥಿಗಲಾದ ಮುತ್ತುರಾಜ ಕೊಲಕಾರ, ಬೀರಪ್ಪ ಕುಂದರಗಿ, ಶಿವರಾಜ ಅಸ್ಕಿ, ವಿಶ್ವನಾಥ ಪೊಲೀಸ್‌ಪಾಟೀಲ, ಪ್ರಭು ಹುನಕುಂಟಿ, ಒಳಗೊಂಡು ನೂರಾರು ಜನ ಹಳೆಯ ವಿಧ್ಯಾರ್ಥಿಗಳು ಭಾಗಿಯಾಗಿದ್ದರು. ಅಶೋಕ ಹಡ್ಲಗೇರಿ ಸ್ವಾಗತಿಸಿದರು. ಎಂ.ಎನ್.ಅಸ್ಕಿ ನಿರೂಪಿಸಿದರು. ಮುತ್ತುರಾಜ ಕೊಲಕಾರ ವಂದಿಸಿದರು.

# ರಸಾಯನಶಾಸ್ತ್ರ ಕೇವಲ ವಿಜ್ಞಾನದ ಒಂದು ವಿಷಯವಲ್ಲ ಜೀವನದ ಬಗ್ಗೆ ಹೇಳುತ್ತದೆ: ಡಾ ಈರೇಗೌಡ



**ಕಲಬುರಗಿ:ಡಿ.30:**ರಸಾಯನಶಾಸ್ತ್ರವು ವಿಜ್ಞಾನದ ಒಂದು ಭಾಗ ಮಾತ್ರವಲ್ಲ, ಪ್ರೀತಿ, ಬದಲಾವಣೆ ಮತ್ತು ಜೀವನದ ಬಗ್ಗೆಯೂ ಮಾತಾಡುತ್ತದೆ ಎಂದು ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಂಘದ ರಾಜ್ಯಾಧ್ಯಕ್ಷ ಡಾ ಜಿ ಬಿ ಈರೇಗೌಡ ಹೇಳಿದರು

ಅವರು ಶ್ರೀ ಗುರು ನಾಗಲಿಂಗೇಶ್ವರ ಕಾಲೇಜಿನಲ್ಲಿ ನಡೆದ ಕಲಬುರ್ಗಿ ಜಿಲ್ಲೆಯ ಪದವಿಪೂರ್ವ ಕಾಲೇಜುಗಳ ರಸಾಯನಶಾಸ್ತ್ರ ಉಪನ್ಯಾಸಕರ ವೇದಿಕೆಯ 25 ನೇ ವರ್ಷದ ಬೆಳ್ಳಿ ಹಬ್ಬ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು. ಇದು ಪರಮಾಣುಗಳ ಆಟದಿಂದ ಹಿಡಿದು ಪ್ರಪಂಚದ ಶಾಂತಿ ಮತ್ತು ಮಾನವ ಸಂಬಂಧಗಳವರೆಗೆ ಎಲ್ಲವನ್ನೂ ಅನ್ವೇಷಿಸುತ್ತದೆ, ಮತ್ತು ನಾವು ಅದನ್ನು ಕಲಿಯುವುದರಿಂದ ಜಗತ್ತು ಸುಧಾರಿಸುತ್ತದೆ ಎಂದು ಹೇಳುತ್ತದೆ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಕಲಬುರ್ಗಿ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ ಪದವಿಪೂರ್ವ ವಿಭಾಗದ ಉಪನಿರ್ದೇಶಕರಾದ ಸುರೇಶ್ ಅಕ್ಕಣ್ಣ ಮಾತನಾಡಿ ಒಂದು ವಿಷಯದ ಸಂಘ 25 ವರ್ಷಗಳವರೆಗೆ ನಿರಂತರವಾಗಿ ಕಾರ್ಯ ಚಟುವಟಿಕೆ ಮಾಡುತ್ತಿರುವದು ಶ್ಲಾಘನೀಯ ಎಂದು ಹೇಳಿದರು. ಇಂದಿನ ಈ ಬೆಳ್ಳಿ ಹಬ್ಬದಲ್ಲಿ ಈ ವೇದಿಕೆ ಹುಟ್ಟು ಹಾಕಿದ ಸಂಸ್ಥಾಪಕರು ಹಾಗೂ ಇದನ್ನು ಮುನ್ನಡೆಸುತ್ತಿರುವ ಈಗಿನ ಸಿಬ್ಬಂದಿ ಹಾಗೂ ರಸಾಯನ ಶಾಸ್ತ್ರ ವಿಷಯದ ಜೋತೆ ಎಲ್ಲ ವಿಷಯಗಳ ಉಪನ್ಯಾಸಕರು ಒಂದೆಡೆ ಸೇರಿ ಕಾರ್ಯಕ್ರಮ ಮಾಡುತ್ತಿರುವದು ಒಳ್ಳೆಯ ಕಾರ್ಯಕ್ರಮವಾಗಿದೆ ಎಂದು ಹೇಳಿದರು. ಈ ಬಾರಿ ಪಿಯುಸಿ ದ್ವಿತೀಯ ವರ್ಷದ ಫಲಿತಾಂಶ ಹೆಚ್ಚಾಗುವ ದಿಸೆಯಲ್ಲಿ ಎಲ್ಲರೂ ಕಾರ್ಯ ನಿರ್ವಹಿಸಬೇಕು ಎಂದು ಹೇಳಿದರು.

ಇನ್ನೋರ್ವ ಅತಿಥಿಗಳಾದ ತಿಪಟೂರು ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶಿವಕುಮಾರ್ ಎಂ ಡಿ ಮಾತನಾಡಿ ಕಲ್ಯಾಣ ಕರ್ನಾಟಕ ಜನತೆ ಪ್ರೀತಿ ವಿಶ್ವಾಸ ಎಂದೂ ಮರೆಯಲು ಸಾಧ್ಯವಿಲ್ಲ ಏಕೆಂದರೆ ನಾನು ಈ ಭಾಗದಲ್ಲಿ ಕೆಲಸ ನಿರ್ವಹಿಸಿರುವೆ ಅದನ್ನು ನಾನೆಂದೂ ಮರೆಯಲಾರೆ ಎಂದು ಹೇಳಿದರು.

ವೇದಿಕೆಯ ಮೇಲೆ ಕಲಬುರ್ಗಿ ಜಿಲ್ಲಾ ಪ್ರಾಚಾರ್ಯ ಸಂಘದ ಅಧ್ಯಕ್ಷರಾದ ಶಿವಾನಂದ ಖಜೂರಿ, ಡಾ ಪ್ರಹ್ಲಾದ ಬುರ್ಲಿ, ನಿತೀನ್ ನಾಯಕ, ವಿಭಾಗಿಯ ಅಧ್ಯಕ್ಷರಾದ ಎಂ ವೀರನಗೌಡ, ಶಶಿಕಾಂತ ಗುಳೇದ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಅಧ್ಯಕ್ಷರಾದ ರಾಜಕುಮಾರ್ ಬಾಸುತ್ಕರ ವಹಿಸಿದ್ದರು

ಸಂಸ್ಥಾಪಕ ಅಧ್ಯಕ್ಷರಾದ ಡಾ ಎಂ ಎನ್ ಹೊಸೂರು ಪ್ರಾಸ್ತಾವಿಕವಾಗಿ ಮಾತನಾಡಿದರು ಪ್ರಾಚಾರ್ಯರಾದ ಶಿವರಾಜ್ ಶೀಲವಂತ ಸ್ವಾಗತಿಸಿದರು ಗುರುರಾಜ ಕುಲಕರ್ಣಿ ಕಾರ್ಯಕ್ರಮ ನಿರೂಪಿಸಿದರು ಬಸವರಾಜ ಅಂಗಡಿ ವಂದಿಸಿದರು

## ಪಾಲಿಕ್ಲಿನಿಕ್ ಬೀದರಗೆ ರಾಜ್ಯಮಟ್ಟದ ಅತ್ಯುತ್ತಮ ಪಶುವೈದ್ಯಕೀಯ ಸೇವಾ ಪ್ರಶಸ್ತಿ



**ಬೀದರ, ಡಿ.30–** ಪಶು ಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು ಆಯುಕ್ತಾಲಯದಿಂದ ಆಯೋಜಿಸಲಾಗಿದ 70ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಜ್ಯಮಟ್ಟದ ಅತ್ಯುತ್ತಮ ಪಾಲಿಕ್ಲಿನಿಕ್ ಸ್ಪರ್ದೆಯಲ್ಲಿ ಬೀದರ ಜಿಲ್ಲೆಯ ಪಶು ಇಲಾಖೆಯ ಪಶುವೈದ್ಯಕೀಯ ಪಾಲಿಕ್ಲಿನಿಕ್ (ಜಿಲ್ಲಾ ಪಶು ಆಸ್ಪತ್ರೆ)ಗೆ "ಮೂರನೆಯ" ಅತ್ಯುತ್ತಮ ಪಾಲಿಕ್ಲಿನಿಕ್ ಪ್ರಶಸ್ತಿಯಂದು ಘೋಷಿಸಲಾಗಿದ್ದು. ಸದರಿ ಪ್ರಶಸ್ತಿ ಮತ್ತು ಪ್ರಶಂಸನಾ ಪತ್ರಯನ್ನು ಪಾಲಿಕ್ಲಿನಿಕ್ ಬೀದರನ ಮಾನ್ಯ ಉಪನಿರ್ದೇಶಕರಾದ ಡಾ.ರವಿಂದ್ರಕುಮಾರ ಭೂರೆ ರವರಿಗೆ ನೀಡಿ ಬೆಂಗಳೂರುನಲ್ಲಿ ಗೌರವಿಸಲಾಯಿತು.ರಾಜ್ಯಮಟ್ಟದಲ್ಲಿ ಆಯ್ಕೆ ಪ್ರಕ್ರಿಯೆಯ ಮೂಲಕ ನೀಡಲಾದ ಈ ಪ್ರಶಸ್ತಿಯು ಪಾಲಿಕ್ಲಿನಿಕ್ ಬೀದರನ ಮೂಲಸೌಕರ್ಯಗಳು, ಸ್ವಚ್ಛತೆ , ಆಧುನಿಕ ಸೌಲಭ್ಯಗಳು ಹಾಗೂ ವಿವಿಧ ರೋಗಗ್ರಸ್ತ ಪ್ರಾಣಿಗಳ ಗುಣಮಟ್ಟದ ಚಿಕಿತ್ಸೆ/ ಶಸ್ತ್ರಚಿಕಿತ್ಸೆಯನ್ನು ನೀಡುವ ಜೊತೆಗೆ ಸಾರ್ವಜನಿಕರಿಗೆ ನಿರಂತರ ಪಶುವೈದ್ಯಕೀಯ ಸೇವೆಯನ್ನು ಗುರುತಿಸಿ ಈ ಗೌರವವನ್ನು ನೀಡಲಾಗಿದೆ.ಈ ಪ್ರಶಸ್ತಿಗೆ ಪಾಲಿಕ್ಲಿನಿಕ್ ಬೀದರನ ಮುಖ್ಯ ಪಶುವೈದ್ಯರಾದ ಡಾ.ಗೌತಮ ಅರಳಿ, ಡಾ.ನೀಲಕಂಠ ಚನ್ನಶೆಟ್ಟಿ, ಡಾ.ಶ್ರೀಕಾಂತ ಬಿರಾದಾರ ಮತು ಸಿಬ್ಬಂದಿಯವರು ಹರ್ಷ ವ್ಯಕ್ತ ಪಡಿಸಿದರು.

# ಜನವರಿ 3ರಂದು ಜಿಲ್ಲಾಡಳಿತದಿಂದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ

ಧೈರ್ಯದ ದಾರಿ

**ರಾಯಚೂರು ಡಿ,30–** ಇಲ್ಲಿಯ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 2026ರ ಜನವರಿ 3ರ ಬೆಳಿಗ್ಗೆ 11 ಗಂಟೆಗೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ.

ದೇವದುರ್ಗದ ಮೂಲ ಪೀಠದ ವಿಶ್ವಕರ್ಮ ಶ್ರೀಮದ್ ಮದಾನೆಗುಂದಿ ಸರಸ್ವತಿ ಸಂಸ್ಥಾನದ ಶ್ರೀಶ್ರೀ ಮೌನೇಶ್ವರ ಮಹಾಸ್ವಾಮಿಗಳು ದಿವ್ಯಾ ಸಾನಿಧ್ಯ ವಹಿಸಲಿದ್ದಾರೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟಿಸುವರು. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು.

ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್. ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕಲಬುರಗಿ ವಿಭಾಗದ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪುಟ್ಟಮಾದಯ್ಯ ಎಂ, ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

ಎಸ್.ಆರ್.ಕೆ. ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಪಕರಾದ ಡಾ.ಸವಿತಾ ಪಂಪಾಪತಿ ಬಡಿಗೇರ್ ಅವರು ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಕುರಿತು ಉಪನ್ಯಾಸ ನೀಡುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಾರಸುದಾರರ ಪತೆಗೆ ರೈಲ್ವೇ ಪೊಲೀಸರ ಮನವಿ

ಧೈರ್ಯದ ದಾರಿ



**ರಾಯಚೂರು ಡಿ,30–** ಯಾದಗಿರಿ ರೈಲ್ವೇ ನಿಲ್ದಾಣದ ವೇದಿಕೆ ನಂಬರ್ 01 ರಲ್ಲಿ ಡಿಸೆಂಬರ್ 26ರ ಬೆಳಿಗ್ಗೆ 7.10ಗಂಟೆಗೆ ಅಸ್ವಸ್ತಗೊಂಡಿದ್ದ ಅಪರಿಚಿತ ಸುಮಾರು 70 ವರ್ಷದ ಗಂಡಸ್ಸು ಯಾವುದೋ ವಯೋಸಹಜ ಖಾಯಿಲೆಯಿಂದ ಬಳಲಿ ಸ್ವಾಭಾವಿಕವಾಗಿ ಮೃತಪಟ್ಟಿದ್ದು, ಈ ಕುರಿತು ರಾಯಚೂರಿನ ರೈಲ್ವೇ ಠಾಣೆಯಲ್ಲಿ ಯು.ಡಿ.ಆರ್ ನಂ:72/2025 ಯು/ಎಸ್ 194 ಬಿಎನ್‌ಎಸ್‌ಎಸ್ ರಿತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ವ್ಯಕ್ತಿಯನ್ನು ಯಾದಗಿರಿಯ ಯೀಮ್ಸ್ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆಗೆ ಸ್ಪಂದಿಸದೇ ಯಾವುದೋ ವಯೋಸಹಜ ಖಾಯಿಲೆಯಿಂದ ಬಳಲಿ ಸ್ವಾಭಾವಿಕವಾಗಿ ಮೃತಪಟ್ಟದ್ದಾರೆ. ಮೃತದೇಹ ದೋರೆತ ಘಟನಾ ಸ್ಥಳಗಳಲ್ಲಿ ಮೃತನ ವಾರಸುದಾರರು ಯಾರು ಪತ್ತೆಯಾಗಿರುವುದಿಲ್ಲ. ಆದ್ದರಿಂದ ಮೃತನ ವಾರುಸುದಾರ ಪತ್ತೆ ಹಾಗೂ ಪಿ.ಎಂ.ಇ. ಸಲುವಾಗಿ ಮೃತದೇಹಗಳನ್ನು ಯಾದಗಿರಿ ಯೀಮ್ಸ್ ಜಿಲ್ಲಾ ಆಸ್ಪತ್ರೆಯ ಶೀತಲ ಶವಗಾರದಲ್ಲಿ ಇಡಲಾಗಿದೆ.

ಅಪರಿಚಿತ ಗಂಡಸ್ಸು ವಯಸ್ಸು ಸುಮಾರು 70 ವರ್ಷ, ಎತ್ತರ ಸುಮಾರು 5.4 ಅಡಿ, ಉದ್ದ ಮುಖ, ಉದ್ದನೆಯ ಮೂಗು, ಕಪ್ಪು ಕಣ್ಣುಗಳು, ತಲೆಯಲ್ಲಿ 2 ಇಂಚು ಬಿಳಿ ಕೂದಲು, 2 ಇಂಚು ಬಿಳಿ ಗಡ್ಡ ಮೀಸೆ ಬಿಟ್ಟಿದ್ದು, ಬಡುಕಲು ಶರೀರ ಹೊಂದಿರುತ್ತಾನೆ.

ಒಂದು ನೀಲಿ ಬಣ್ಣ ಗೆರೆಯುಳ್ಳ ಮಾಸಿದ ಬಿಳಿಯ ಶರ್ಟು, ಒಂದು ಕಪ್ಪು ಬಣ್ಣದ ಪ್ಯಾಂಟು ಒಂದು ಕೆಂಪು ಮತ್ತು ನೀಲಿ ಬಣ್ಣ ಮಿಶ್ರಿತ ಬಟ್ಟೆಯನ್ನು ಧರಿಸಲಾಗಿದೆ. ಕೈಯಲ್ಲಿ ಒಂದು ಹಳೆಯ ದಾರವನ್ನು ಹೊಂದಲಾಗಿದೆ.

ಈ ಮೃತನ ವಾರಸುದಾರರು ಪತ್ತೆಯಾದಲ್ಲಿ ಅಥವಾ ಈ ಮೃತನ ಹೋಲಿಕೆಯ ಪುರುಷ ಕಾಣೆಯಾದ ಪ್ರಕರಣ ದಾಖಲಾಗಿದ್ದಲ್ಲಿ ರಾಯಚೂರು ರೈಲ್ವೇ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ:08532 231716 ಅಥವಾ ಮೊಬೈಲ್ ಸಂಖ್ಯೆ: 9480802111 ಅಥವಾ ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ: 080-22871291ಗೆ ಸಂಪರ್ಕ ಮಾಡಬಹುದಾಗಿದೆ ಎಂದು ರಾಯಚೂರು ರೈಲ್ವೆ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜನವರಿ 1ರಿಂದ ಹೊಸದಾಗಿ ಜೆಸ್ಕಾಂ ಲೈನ್‌ಲಿಂಕ್ ಮಾರ್ಗ ಆರಂಭ

**ರಾಯಚೂರು ಡಿ,30** ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪವಿಭಾಗ-2 ಶಾಖೆ-3ರಲ್ಲಿ 110ಕೆವಿ ವಡವಟ್ಟಿ ಉಪ ಕೇಂದ್ರ ದಿಂದ ಹೊರ ಹೊಮ್ಮುವ ಡ್ಬ್ಲೂ-10 ಮುನ್ನೂರುವಾಡಿಗೆ 110ಕೆವಿ ಜವಹಾರ ನಗರ ಉಪ ಕೇಂದ್ರ ದಿಂದ ಹೊಸದಾಗಿ ಲೈನ್‌ಲಿಂಕ್ ಅನ್ನು ನಿರ್ಮಿಸಲಾಗಿದೆ. ಜನವರಿ 1ರಿಂದ ಹೊಸದಾಗಿ ಲೈನ್‌ಲಿಂಕ್ ಮಾರ್ಗವು ಆರಂಭವಾಗುತ್ತಿದ್ದು, ಗ್ರಾಹಕರು ವಿದ್ಯುತ್ ಕಂಬಗಳಿಗೆ ದನ, ಕರು, ಕುರಿ ಹಾಗೂ ಮತ್ತಿತರ ಪ್ರಾಣಿಗಳನ್ನು ಕಟ್ಟುವುದು ವಿದ್ಯುತ್ ಕಂಬಗಳ ಬಳಿ ನಿಲ್ಲುವುದು ಮತ್ತಿತರ ಚಟುವಟಿಕೆಗಳನ್ನು ಮಾಡಬಾರದೆಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE